## ಹಿನ್ನೆಲೆ :

ಭಾರತ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಚರ್ಮ ಕೈಗಾರಿಕೆಯು ಅತ್ಯಂತ ಪ್ರಮುಖ ಸ್ಥಾನವನ್ನು ಹೊಂದಿರುತ್ತದೆ. ರಫ್ತಿನಿಂದ ದೇಶಕ್ಕೆ ಆದಾಯ ತರುವ ಉದ್ದಿಮೆಗಳಲ್ಲಿ ಚರ್ಮ ಕೈಗಾರಿಕೆಯು ಪ್ರಮುಖವಾದ ಒಂದು ಉದ್ಯಮವಾಗಿದೆ. ಈ ಕೈಗಾರಿಕೆಯು ಹೆಚ್ಚಿನ ಉದ್ಯೋಗ ಸೃಷ್ಟಿಸುವಲ್ಲಿ ಸಫಲವಾಗಿದ್ದು ಸಮಾಜದಲ್ಲಿನ ಅತಿ ಹಿಂದುಳಿದ ವರ್ಗದವರಿಗೆ ಮತ್ತು ಹೆಚ್ಚಿನ ರೀತಿಯಲ್ಲಿ ಮಹಿಳೆಯರಿಗೆ ಉದ್ಯೋಗ ಒದಗಿಸಿರುತ್ತದೆ.

ಭಾರತ ದೇಶದಲ್ಲಿ ಪ್ರಪಂಚದಲ್ಲಿನ ಒಟ್ಟಾರೇ ಜಾನುವಾರು ಸಂಖ್ಯೆಯಲ್ಲಿ ಶೇಕಡ 21 ರಷ್ಟು ಹಸು ಮತ್ತು ಎಮ್ಮೆ ಹಾಗೂ ಶೇಕಡ 11 ರಷ್ಟು ಮೇಕೆ ಮತ್ತು ಕುರಿಗಳ ಸಂಖ್ಯೆ ಇರುವುದರಿಂದ ಚರ್ಮ ಕೈಗಾರಿಕೆಗೆ ಕಚ್ಚಮಾಲು ಲಭ್ಯತೆ ವರದಾನವಾಗಿರುತ್ತದೆ. ಇದರ ಜೊತೆಗೆ ನುರಿತ ಮಾನವ ಸಂಪನ್ಮೂಲ / ಕುಶಲಕರ್ಮಿಗಳು, ಆಧುನಿಕ ತಾಂತ್ರಿಕತೆ ಮತ್ತು ಸಮರ್ಪಣ ಭಾವದಿಂದ ಸಹಕಾರಿಯಾಗಿರುವ ಸಂಬಂಧಿತ ಕೈಗಾರಿಕೆಗಳು ಚರ್ಮೋದ್ಯಮವನ್ನು ಮತ್ತಷ್ಟು ಬಲಪಡಿಸಿವೆ.

ಕರ್ನಾಟಕ ರಾಜ್ಯದಲ್ಲಿ ಸಹ ದೇಶದಲ್ಲಿನ ಒಟ್ಟು ಜಾನುವಾರು ಸಂಖ್ಯೆಯಲ್ಲಿ ಹಸು ಮತ್ತು ಎಮ್ಮೆಗಳ ಸಂಖ್ಯೆ ಶೇಕಡ 10.87 ರಷ್ಟು ಮತ್ತು ಮೇಕೆ ಮತ್ತು ಕುರಿಗಳ ಸಂಖ್ಯೆ ಶೇಕಡ 9.5 ರಷ್ಟು ಇದ್ದು ಕರ್ನಾಟಕವು ಕುರಿಗಳ ಸಂಖ್ಯೆಯಲ್ಲಿ ಮೊದಲನೆ 05 ರಾಜ್ಯಗಳಲ್ಲಿ ಒಂದಾಗಿದೆ. ಕರ್ನಾಟಕದಲ್ಲಿ ಸಹ ಕಚ್ಚಾಮಾಲು ಲಭ್ಯತೆಗೆ ಕೊರತೆ ಇರುವುದಿಲ್ಲ ಹಾಗೂ ಪಕ್ಕದ ತಮಿಳುನಾಡು ರಾಜ್ಯದಲ್ಲಿ ಕೂಡ ಹೆಚ್ಚಿನ ಟ್ಯಾನಿಂಗ್ ಕೈಗಾರಿಕೆಗಳು ಇರುವುದರಿಂದ ಗುಣಮಟ್ಟದ ಕಚ್ಚಾಮಾಲು ದೊರಕುವುದು ಸುಲಭಸಾಧ್ಯವಾಗಿರುತ್ತದೆ. ಅಲ್ಲದೆ ಚರ್ಮ ತಾಂತ್ರಿಕತೆಯಲ್ಲಿ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಗೊಳಿಸುವ ಸಂಸ್ಥೆಗಳಿದ್ದು ಸಾಂಪ್ರದಾಯಿಕ ಮತ್ತು ನುರಿತ ಕುಶಲಕರ್ಮಿಗಳ ಸಂಖ್ಯೆ ಅಂದಾಜು 1,00,000 ದಿಂದ 1,50,000 ಲಕ್ಷಗಳಿರುತ್ತದೆ.

ದೇಶದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಚರ್ಮ ಕೈಗಾರಿಕೆಗೆ ಇಷ್ಟೊಂದು ಪೂರಕ ವಾತಾವರಣವಿದ್ದರು ಸಹ ಸರಿಯಾದ ಯೋಜನೆಗಳನ್ನು ರೂಪಿಸದೆ ಇರುವುದರಿಂದ ಚರ್ಮೋದ್ಯಮದಲ್ಲಿ ತೊಡಗಿರುವ ಪರಿಶಿಷ್ಠ ಜಾತಿಯ ಕುಶಲಕರ್ಮಿಗಳಿಗೆ ಬಡತನ ರೇಖೆಯಿಂದ ಹೊರಗೆ ಬರಲು ಸಾಧ್ಯವಾಗಿರುವುದಿಲ್ಲ. ಕಾರಣ ಇವರು ಉತ್ಪಾದನೆ ಮಾಡುತ್ತಿರುವ ಪಧಾರ್ಥಗಳಿಗೆ ಸರಿಯಾದ ಮಾರುಕಟ್ಟೆ ಕಲ್ಪಿಸದೆ ಇರುವುದು. ಅವರುಗಳಿಗೆ ಬಂಡವಾಳ ಹೂಡಿಕೆಯ ಶಕ್ತಿ ಮತ್ತು ಮಾರುಕಟ್ಟೆಯ ವಿಧಿ ವಿಧಾನಗಳನ್ನು ಅರಿಯುವ ಶಕ್ತಿ ಇಲ್ಲದೆ ಇರುವುದರಿಂದ ಖಾಸಗಿ ಡೀಲರ್‌ಗಳ ಮದ್ಯಸ್ಥಿಕೆಯಿಂದ ಶೋಷಣೆಗೆ ಒಳಗಾಗುತ್ತಿದ್ದಾರೆ. ಹಾಗೂ ಸ್ವಾವಲಂಬಿಗಳಾಗದೆ ಬಡತನದ ಬದುಕನ್ನು ಸಾಗಿಸುತ್ತಿದ್ದಾರೆ ಹಾಗೂ ಅವರ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸವನ್ನು ಕಲ್ಪಿಸಲು ಸಹ ವಿಫಲರಾಗಿರುತ್ತಾರೆ.

ಈ ರೀತಿಯ ವಾತಾವರಣದಲ್ಲಿ ಬದುಕನ್ನು ಸಾಗಿಸುತ್ತಿರುವ ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆ ಆಗಬೇಕಾದಲ್ಲಿ ಘನ ಸರ್ಕಾರದ ಮದ್ಯಸ್ಥಿಕೆ ಬಹು ಮುಖ್ಯವಾಗಿರುತ್ತದೆ. ಸರ್ಕಾರದ ವತಿಯಿಂದ ಚರ್ಮೋದ್ಯಮದಲ್ಲಿ ತೊಡಗಿರುವ ಕುಶಲಕರ್ಮಿಗಳಿಗೆ ಉನ್ನತ ಮಟ್ಟದ ತರಬೇತಿ ನೀಡಿ ಉತ್ತಮ ಗುಣಮಟ್ಟದ ಪಧಾರ್ಥಗಳನ್ನು ತಯಾರಿಸುವ ಸಾಮರ್ಥ್ಯ ಬೆಳಸಿ, ಮಾರುಕಟ್ಟೆಯ ವಿಧಿ ವಿಧಾನಗಳ ಬಗ್ಗೆ ಅರಿವು ಮೂಡಿಸುವುದು ಮತ್ತು ಬಂಡವಾಳದ ಕೊರತೆಯನ್ನು ನೀಗಿಸಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು ಅತ್ಯವಶ್ಯಕವಾಗಿರುತ್ತದೆ.

ಈ ನಿಟ್ಟಿನಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವರು ಹಲವಾರು ಭಾರಿ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳೊಂದಿಗೆ ಚರ್ಚಿಸಿ ಈ ಒಂದು ಸಮಾಜದ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಗಾಗಿ ಹಾಗೂ ಉತ್ಪಾದನೆ ಮತ್ತು ಮಾರುಕಟ್ಟೆ ನಡುವೆ ಬಲಿಷ್ಠ ಲಿಂಕೇಜ್ ಸ್ಥಾಪಿಸಿ ಅಮೂಲಾಗ್ರ ಬದಲಾವಣೆ ತರಲು ಯೋಜನೆ ರೂಪಿಸುವಂತೆ ಸೂಚಿಸಿರುತ್ತಾರೆ. ಅಂತೆಯೇ ಕೆಳಕಂಡ ಯೋಜನೆಗಳನ್ನು ರೂಪಿಸಲಾಗಿದೆ. ಯೋಜನೆಗಳ ವಿವರಗಳನ್ನು ಮುಂದಿನ ಪುಟಗಳಲ್ಲಿ ತೋರಿಸಲಾಗಿದೆ.

## ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ
## 2017–18 ನೇ ಸಾಲಿನ ಕ್ರಿಯಾ ಯೋಜನೆ

### ಘೋಷಾವಾರು

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಯೋಜನೆಗಳು | ಆರ್ಥಿಕ | ಭೌತಿಕ |
|---|---|---|---|
| 1 | ಚರ್ಮ ಕುಶಲಕರ್ಮಿಗಳ ಸಮೀಕ್ಷೆ | 100.00 | 030 |
| 2 | ತರಬೇತಿ ಕಾರ್ಯಕ್ರಮಗಳು | 456.50 | 975 |
| 3 | ಸ್ವಯಂ ಉದ್ಯೋಗ ಯೋಜನೆಗಳು | 199.80 | 712 |
| 4 | ವಾಣಿಜ್ಯ ಉತ್ತೇಜನ ಕಾರ್ಯಕ್ರಮಗಳು | 125.00 | 005 |
| 5 | ಮೂಲಭೂತ ಸೌಕರ್ಯಗಳ ಅಭಿವೃದ್ಧಿ | 3787.00 | 1209 |
| 6 | ಕಲ್ಯಾಣ ಯೋಜನೆಗಳು | 00.00 | 2500 |
| 7 | ನಿರ್ವಹಣಾ ವೆಚ್ಚ | 331.70 | 000 |
|  | **ಒಟ್ಟು ಮೊತ್ತ** | **5000.00** | **5431** |

# 2017–18ನೇ ಸಾಲಿನ ಕ್ರಿಯಾ ಯೋಜನೆ ಸಂಕ್ಷಿಪ್ತ ವಿವರಗಳು

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಯೋಜನೆ | ಆರ್ಥಿಕ | ಭೌತಿಕ | ಪುಟ ಸಂಖ್ಯೆ |
|---|---|---|---|---|
| I. | 1. **ಚರ್ಮ ಕುಶಲಕರ್ಮಿಗಳ ಸಮೀಕ್ಷೆ :** (ನಿಗಮವು ಪರಿಣಾಮಕಾರಿಯಾದ ಕ್ರಿಯಾ ಯೋಜನೆ ರೂಪಿಸಲು ಮತ್ತು ವೈಜ್ಞಾನಿಕವಾಗಿ ಜಿಲ್ಲಾವಾರು/ ತಾಲ್ಲೂಕುವಾರು ಗುರಿ ನಿಗದಿಪಡಿಸಲು ಅನುವಾಗುವಂತೆ ರಾಜ್ಯದ್ಯಂತ ಇರುವ ಚರ್ಮ ಕುಶಲಕರ್ಮಿಗಳ ನಿಖರ ಸಂಖ್ಯೆಯನ್ನು ತಿಳಿಯುವ ದೃಷ್ಟಿಯಿಂದ ಸಮೀಕ್ಷೆ ಕಾರ್ಯ ಕೈಗೊಳ್ಳಲು ನಿರ್ಧರಿಸಿದೆ). | 100.00 | 30 ಜಿಲ್ಲೆಗಳು | 1 |
| | ಒಟ್ಟು | **100.00** | **30** | |
| II. | <u>**ತರಬೇತಿ ಕಾರ್ಯಕ್ರಮಗಳು :**</u><br>1. **ಕೌಶಲ್ಯ ಅಭಿವೃದ್ಧಿ ಮತ್ತು ಆದಾಯ ಗಳಿಕೆಗಾಗಿ ತರಬೇತಿ ಶಿಬಿರ :** (ಪಾದರಕ್ಷೆ ಮತ್ತು ಚರ್ಮವಸ್ತುಗಳ ತಯಾರಿಕೆಯಲ್ಲಿ 60 ದಿನಗಳ ಅವಧಿಗೆ ಉನ್ನತ ಮಟ್ಟದ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲಾಗುವುದು. ತರಬೇತಿ ನಂತರ ಗುಡಿ ಕೈಗಾರಿಕೆ ಪ್ರಾರಂಭಿಸಲು ಅವಶ್ಯವಿರುವ ರೂ. 24,000/– ಬೆಲೆ ಬಾಳುವ ಯಂತ್ರೋಪಕರಣಗಳನ್ನು (ಒಂದು ಹೊಲಿಗೆ ಯಂತ್ರ , ಒಂದು ಉಪಕರಣ ಪೆಟ್ಟಿಗೆ ಮತ್ತು ಒಂದು ಸೆಟ್ ಪುಟ್ ವೇರ್ ಲಾಸ್ಟ್) ವಿತರಿಸಲಾಗುವುದು. ಅಲ್ಲದೆ ರೂ. 6000/– ಶಿಷ್ಯ ವೇತನ ನೀಡಲಾಗುವುದು. ಪ್ರತಿ ಕುಶಲಕರ್ಮಿಗೆ ಪಾದರಕ್ಷೆ ತಯಾರಿಕೆ ತರಬೇತಿ ಮತ್ತು ಉಪಕರಣಗಳನ್ನು ನೀಡಲು ತಗಲುವ ವೆಚ್ಚ ಸರಾಸರಿ ರೂ. 36,297/– ಮತ್ತು ಚರ್ಮವಸ್ತುಗಳ ತಯಾರಿಕೆ ತರಬೇತಿಗೆ ಪ್ರತಿ ಕುಶಲಕರ್ಮಿಗೆ ತಗಲುವ ವೆಚ್ಚ ರೂ. 33,047/–) | 312.50 | 900 | 1-4 |
| | 2. **ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಕೌಶಲ್ಯ ವೃದ್ಧಿ ಯೋಜನೆ :** (ಎಸ್.ಎಸ್.ಎಲ್.ಸಿ./ ಪಿ.ಯು.ಸಿ. ಉತ್ತೀರ್ಣ/ ಅನುತ್ತೀರ್ಣರಾದ ಮತ್ತು ಪದವೀಧರರಾದ ಚರ್ಮಕುಶಲಕರ್ಮಿ ಕುಟುಂಬಗಳಿಗೆ ಸೇರಿರುವ ನಿರುದ್ಯೋಗಿ ಯುವಕ/ ಯುವತಿಯರನ್ನು ಪಾದರಕ್ಷೆ / ಚರ್ಮವಸ್ತುಗಳ ವಿನ್ಯಾಸ ಅಭಿವೃದ್ಧಿ ಮತ್ತು ಕೌಶಲ್ಯವೃದ್ಧಿ ತರಬೇತಿಗಾಗಿ ಚೆನ್ನೈನಲ್ಲಿರುವ ಸಿ.ಎಫ್.ಟಿ.ಐ./ ಸಿ.ಎಲ್.ಆರ್.ಐ. /ಎಫ್.ಡಿ.ಡಿ.ಐ./ಕಿಲ್ಪ್, ಬೆಂಗಳೂರು, ಸಂಸ್ಥೆಗಳಿಗೆ ಅಲ್ಪಾವಧಿ ಮತ್ತು ದೀರ್ಘಾವದಿ ಕೋರ್ಸ್‌ಗಳಿಗೆ ನಿಯೋಜಿಸಲಾಗುವುದು. ತರಬೇತಿ ಅವಧಿಯಲ್ಲಿ ಶಿಷ್ಯ ವೇತನ ನೀಡಲಾಗುವುದು). | 144.00 | 75 | 5-6 |
| | ಒಟ್ಟು (1+2) | **456.50** | **975** | |

| ಕ್ರ.ಸಂ. | ಯೋಜನೆ | ಆರ್ಥಿಕ | ಭೌತಿಕ | ಪುಟ ಸಂಖ್ಯೆ |
|---|---|---|---|---|
| III. | **ಸ್ವಯಂ ಉದ್ಯೋಗ ಯೋಜನೆಗಳು**<br>1. **ಗ್ರಾಮ /ಹೋಬಳಿ/ ಪಟ್ಟಣ ಪಂಚಾಯಿತಿ ಪ್ರದೇಶದ ಕುಶಲಕರ್ಮಿಗಳಿಗೆ ಆಧುನಿಕ ಕುಠೀರ ಒದಗಿಸುವುದು :**<br>(ಪಾದರಕ್ಷೆ / ಚರ್ಮವಸ್ತುಗಳ ದುರಸ್ತಿ ಕೆಲಸಗಳಲ್ಲಿ ತೊಡಗಿರುವ ಚರ್ಮಕುಶಲಕರ್ಮಿಗಳಿಗೆ ಗೌರವಯುತವಾಗಿ ಕೆಲಸ ನಿರ್ವಹಿಸಲು ಅನುಕೂಲವಾಗುವಂತೆ ಆಧುನಿಕ ಚರ್ಮಕಾರರ ಕುಟೀರಗಳನ್ನು ಒದಗಿಸಲಾಗುವುದು. ಕುಟೀರದ ಜೊತೆ ರೂ. 3,600/– ಬೆಲೆಯ ಉಪಕರಣ ಪೆಟ್ಟಿಗೆ ಉಚಿತವಾಗಿ ನೀಡಲಾಗುವುದು.<br>ಘಟಕ ವೆಚ್ಚ ರೂ. 70,000/– ಇದರಲ್ಲಿ ರೂ. 63,000/– ಸಹಾಯಧನ ಹಾಗೂ ರೂ. 7000/– ಕುಶಲಕರ್ಮಿಗಳಿಂದ ವಂತಿಗೆ ಹಣ. ಪ್ರತಿ ಕುಶಲಕರ್ಮಿಗೆ ತಗಲುವ ವೆಚ್ಚ ರೂ. 66,600/–). | 199.80 | 300 | 7-8 |
| | 2. **ಕುಶಲಕರ್ಮಿಗಳಿಗೆ ನೇರ ಮಾರಾಟ ಮಳಿಗೆ ಒದಗಿಸುವುದು :**<br>(ಕುಶಲಕರ್ಮಿಗಳು ಉತ್ಪಾದಿಸಿದ ಚರ್ಮೋತ್ಪನ್ನಗಳನ್ನು ಮಾರಾಟ ಮಾಡಿ ಆದಾಯ ಗಳಿಸಿ ಸ್ವಾವಲಂಬಿಗಳಾಗಲು ಅನುಕೂಲವಾಗುವಂತೆ ತಾಲ್ಲೂಕು / ಜಿಲ್ಲಾ / ಮಹಾನಗರ ಪಾಲಿಕೆ / ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಗಳ ಮಟ್ಟದಲ್ಲಿ ನೇರ ಮಾರಾಟ ಮಳಿಗೆಗಳನ್ನು ತೆರೆಯಲು ಮುಂಗಡ ಹಣ, ಒಳಾಂಗಣ ಶೃಂಗಾರ ಮತ್ತು ಬಂಡವಾಳಕ್ಕಾಗಿ ಸಹಾಯ ಧನ ಒದಗಿಸಲಾಗುವುದು. ಒಬ್ಬ ಫಲಾನುಭವಿಗೆ ಮಳಿಗೆ ತೆರೆಯಲು ತಾಲ್ಲೂಕು ಮಟ್ಟದಲ್ಲಿ ರೂ. 2,00,000/– ಜಿಲ್ಲಾ ಕೇಂದ್ರದಲ್ಲಿ ರೂ. 3,00,000/– ಹಾಗೂ ಮಹಾಹಗರ ಪಾಲಿಕೆಗಳ ಪ್ರದೇಶಗಳಲ್ಲಿ ಮಳಿಗೆ ತೆರೆಯಲು ರೂ. 4,00,000/– ಮತ್ತು ಬೃಹತ್ ಮಹಾನಗರ ಪಾಲಿಕೆಗಳ ಪ್ರದೇಶಗಳಲ್ಲಿ ಮಳಿಗೆ ತೆರೆಯಲು ರೂ. 5,00,000/– ಗಳ ಸಹಾಯ ಧನ ಒದಗಿಸಲಾಗುವುದು. ಅಷ್ಟೆ ಮೊತ್ತವನ್ನು ಫಲಾನುಭವಿಗಳು ಬ್ಯಾಂಕಿನಿಂದ ಸಾಲ ಪಡೆಯಬೇಕಾಗುತ್ತದೆ. ಕಳೆದ ಸಾಲಿನ ಉಳಿಕೆ ಹಣದಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು). | – | 100 | 9-10 |

| ಕ್ರ.ಸಂ. | ಯೋಜನೆ | ಆರ್ಥಿಕ | ಭೌತಿಕ | ಪುಟ ಸಂಖ್ಯೆ |
|---|---|---|---|---|
| | 3. **ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಸಹಾಯ ಒದಗಿಸುವ ಯೋಜನೆ.** (ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳನ್ನು ಪ್ರತಿ ತಿಂಗಳಿಗೊಮ್ಮೆ / ಎರಡು ತಿಂಗಳಿಗೊಮ್ಮೆ ಲಿಡಕರ್ ಮಾರಾಟ ಮಳಿಗೆಗಳಲ್ಲಿ ಇರುವ ಬೇಡಿಕೆ ಆಧಾರದ ಮೇಲೆ ಖರೀದಿಸಿ ಲಿಡಕರ್ ಬ್ರಾಂಡ್ ಅಡಿ ಮಾರಾಟ ಮಾಡಿ ಮಾರುಕಟ್ಟೆ ಸಹಾಯ ಒದಗಿಸಲಾಗುವುದು. ಒಬ್ಬ ಕುಶಲಕರ್ಮಿಯಿಂದ ಒಂದು ಬಾರಿಗೆ ರೂ. 50,000/- ದಿಂದ ರೂ. 1,00,000/- ದವರೆಗೆ ಖರೀದಿಸಲಾಗುವುದು. ಕಳೆದ ಸಾಲಿನ ಉಳಿಕೆ ಹಣದಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು). | -- | 148 | 11 |
| | 4. **ಸ್ವಯಂ ಉದ್ಯೋಗಕ್ಕೆ ದುಡಿಮೆ ಬಂಡವಾಳ ಸಾಲ ಯೋಜನೆ** ಚರ್ಮ ಕುಶಲಕರ್ಮಿಗಳು ಆರ್ಥಿಕವಾಗಿ ದುರ್ಬಲರಾಗಿರುವುದರಿಂದ ಸ್ವಾವಲಂಬಿಗಳಾಗಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಮತ್ತು ನಿಗಮದಿಂದ ಉತ್ಪನ್ನಗಳನ್ನು ಖರೀದಿಸಲು ಆದೇಶ ನೀಡಿದಾಗ ಕಚ್ಚಾಮಾಲು ಹೊಂದಿಸಲು ಬಂಡವಾಳಕ್ಕಾಗಿ ಹಾಗೂ ವ್ಯಾಪಾರ ಇತ್ಯಾದಿ ಚಟುವಟಿಕೆಗಳಿಗಾಗಿ ಕುಶಲಕರ್ಮಿಗಳು ಬ್ಯಾಂಕ್ ಮೂಲಕ ರೂ. 1.00 ಲಕ್ಷದವರೆಗೆ ದುಡಿಮೆ ಬಂಡವಾಳ ಸಾಲ ಪಡೆದಲ್ಲಿ ನಿಗಮದಿಂದ ಶೇ. 50 ರಷ್ಟು ಸಹಾಯಧನವನ್ನು ನಿಗಮದಿಂದ ನೀಡಲಾಗುವುದು. ಉಳಿದ ಮೊತ್ತ ಬ್ಯಾಂಕಿನ ಸಾಲವಾಗಿರುತ್ತದೆ. (ಕಳೆದ ಸಾಲಿನ ಉಳಿಕೆ ಹಣದಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು). | – | 164 | 11 |
| | **ಒಟ್ಟು** | **199.80** | **712** | |

| ಕ್ರ.ಸಂ. | ಯೋಜನೆ | ಆರ್ಥಿಕ | ಭೌತಿಕ | ಪುಟ ಸಂಖ್ಯೆ |
|---|---|---|---|---|
| IV. | **ವಾಣಿಜ್ಯ ಉತ್ತೇಜನ ಕಾರ್ಯಕ್ರಮಗಳು**<br>1. **ಲಿಡಕರ್ ಮಾರಾಟ ಮಳಿಗೆಗಳ ಉನ್ನತೀಕರಣ:**<br>(ಹೆಚ್ಚಿನ ಗ್ರಾಹಕರನ್ನು ಆಕರ್ಷಿಸಿ ಮಾರಾಟ ಹೆಚ್ಚಿಸುವ ನಿಟ್ಟಿನಲ್ಲಿ ಹಾಲಿ ಇರುವ ಲಿಡಕರ್ ಮಾರಾಟ ಮಳಿಗೆಗಳ ಒಳಾಂಗಣ ಶೃಂಗಾರವನ್ನು ಉನ್ನತೀಕರಣಗೊಳಿಸಲಾಗುವುದು). | 50.00 | 03 | 12 |
| | 2. **ರಾಜ್ಯ ಮಟ್ಟದ ಚರ್ಮಕರಕುಶಲ ವಸ್ತು ಪ್ರದರ್ಶನ ಮತ್ತು ಮಾರಾಟ :**<br>(ಎಲ್ಲಾ 30 ಜಿಲ್ಲೆಗಳಿಂದ ಕುಶಲಕರ್ಮಿಗಳನ್ನು ಆಹ್ವಾನಿಸಿ ಅವರು ತಯಾರಿಸಿದ ಉತ್ಪನ್ನಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡಲು ರಾಜ್ಯ ವಿಭಾಗ ಮಟ್ಟದಲ್ಲಿ ವ್ಯವಸ್ಥೆ ಕಲ್ಪಿಸಲಾಗುವುದು. ಕುಶಲಕರ್ಮಿಗಳ ಉತ್ಪನ್ನಗಳಿಗೆ ಮಾರುಕಟ್ಟೆ ಅಭಿವೃದ್ಧಿ ಸಹಾಯವನ್ನು (MDA) ಒದಗಿಸಲಾಗುವುದು. ) | 20.00 | 02 | 12 |
| | 3. **ಪ್ರಚಾರ ಮತ್ತು ಜಾಹೀರಾತು**<br>(ನಿಗಮದ ಯೋಜನೆಗಳ ಬಗ್ಗೆ ಅರಿವು ಮೂಡಿಸಲು ಕರಪತ್ರ , ಪೋಸ್ಟರ್ ಮತ್ತು ಬ್ರೋಚರ್ ಗಳನ್ನು ಮುದ್ರಿಸುವುದಲ್ಲದೆ ಅರ್ಜಿಗಳನ್ನು ಆಹ್ವಾನಿಸಲು ಎಲ್ಲಾ ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗುವುದು. ಹಾಗೂ ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿ ಆವರಣದಲ್ಲಿ ಹೋರ್ಡಿಂಗ್ ಗಳನ್ನು ಸ್ಥಾಪಿಸಲಾಗುವುದು. ಇದಲ್ಲದೆ ಪ್ರಮುಖ ಹಬ್ಬಗಳ ಸಂದರ್ಭದಲ್ಲಿ ರಿಯಾಯಿತಿ ಮಾರಾಟ ಹಮ್ಮಿಕೊಂಡಾಗ ಪತ್ರಿಕೆಗಳಲ್ಲಿ ಜಾಹೀರಾತು ನೀಡಲಾಗುವುದು). | 30.00 | – | 12 |
| | 4. **ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳ ಮಾರಾಟದ ಮೇಲೆ ರಿಯಾಯಿತಿ ನೀಡುವುದು.**<br>(ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳನ್ನು ಹೆಚ್ಚು ಹೆಚ್ಚು ಮಾರಾಟ ಮಾಡಿ ನಿರಂತರ ಉದ್ಯೋಗ ಒದಗಿಸುವ ದೃಷ್ಟಿಯಿಂದ ಪ್ರಮುಖ ಹಬ್ಬಗಳ ಸಂಧರ್ಭದಲ್ಲಿ ಉತ್ಪನ್ನಗಳ ಗುಣಮಟ್ಟ ಆಧರಿಸಿ ಶೇ.20 ರಿಂದ ಶೇ. 40 ರವರೆಗೆ ರಿಯಾಯಿತಿ ನೀಡಿ ಮಾರಾಟ ಮಾಡಲಾಗುವುದು). | 25.00 | – | 13 |
| | **ಒಟ್ಟು** | **125.00** | **05** | |
| | | | | |

| ಕ್ರ.ಸಂ. | ಯೋಜನೆ | ಆರ್ಥಿಕ | ಭೌತಿಕ | ಪುಟ ಸಂಖ್ಯೆ |
|---|---|---|---|---|
| V | **ಮೂಲಭೂತ ಸೌಕರ್ಯಗಳ ಅಭಿವೃದ್ಧಿ :**<br>1. **ಡಾ.ಬಾಬು ಜಗಜೀವನರಾಂ ವಸತಿ ಕಾರ್ಯಗಾರ ನಿರ್ಮಾಣ ಯೋಜನೆ :**<br>(ವಸತಿ ರಹಿತ ಚರ್ಮಕುಶಲ ಕರ್ಮಿಗಳಿಗೆ ಅವರು ನಿವೇಶನ ಹೊಂದಿದ್ದಲ್ಲಿ ಅಥವಾ ಲಿಡಕರ್ ಸಂಕೀರ್ಣಗಳಲ್ಲಿ ಜಾಗ ಲಭ್ಯವಿದ್ದಲ್ಲಿ / ಶಿಥಿಲಗೊಂಡ ಮನೆಗಳಿದ್ದಲ್ಲಿ / ಗುಡಿಸಲುಗಳಲ್ಲಿ ವಾಸವಿದ್ದಲ್ಲಿ ರೂ. 2.50 ಲಕ್ಷಗಳ ಘಟಕ ವೆಚ್ಚದಲ್ಲಿ ವಸತಿ ಕಾರ್ಯಾಗಾರ ನಿರ್ಮಿಸಿ ಕೊಡಲಾಗುವುದು. ಘಟಕ ವೆಚ್ಚದಲ್ಲಿ ರೂ. 2.20 ಲಕ್ಷ ಸಹಾಯಧನದ ರೂಪದಲ್ಲಿ ನೀಡಲಾಗುತ್ತಿದ್ದು ಉಳಿದ ರೂ. 30,000/–ಗಳನ್ನು ಕುಶಲ ಕರ್ಮಿಗಳಿಂದ ವಂತಿಕೆಯನ್ನು ಕೂಲಿ ಮತ್ತು ಸಾಮಾಗ್ರಿಗಳ ರೂಪದಲ್ಲಿ ಪಡೆಯಲಾಗುವುದು.) 1000x2.20 ಲಕ್ಷ | 2200.00 | 1000 | 14 |
| | 2. **ವಸತಿ ಕಾರ್ಯಾಗಾರ ನಿರ್ಮಿಸಲು ಜಮೀನು ಖರೀದಿಸುವುದು ಮತ್ತು ಜಿ + 2 / ವೈಯಕ್ತಿಕ ಮಾದರಿಯ ವಸತಿ ಸಹಿತ ಕಾರ್ಯಾಗಾರಗಳನ್ನು ನಿರ್ಮಿಸುವುದು.**<br>(ಸರ್ಕಾರವು ಮಂಜೂರು ಮಾಡುವ/ ಸಂಘ ಸಂಸ್ಥೆಗಳು ಉಚಿತವಾಗಿ ನಿಗಮದ ಹೆಸರಿಗೆ ನೀಡುವ ಜಮೀನುಗಳಲ್ಲಿ ಚರ್ಮ ಕುಶಲಕರ್ಮಿಗಳಿಗೆ ಜಿ + 2 ಮಾದರಿ / ವೈಯಕ್ತಿಕ ವಸತಿ ಕಾರ್ಯಾಗಾರಗಳನ್ನು ನಿರ್ಮಿಸಿಕೊಡಲಾಗುವುದು. ಘಟಕ ವೆಚ್ಚ ರೂ. 3.36 ಲಕ್ಷಗಳು ಅಲ್ಲದೇ ಜಮೀನಿಗೆ ನಿಗದಿಪಡಿಸುವ ಶುಲ್ಕವನ್ನು ನಿಗಮದಿಂದಲೇ ಪಾವತಿಸಲಾಗುವುದು). | 672.00 | 200 | 14 |
| | 3. **ಬೆಂಗಳೂರು ವಸಂತನಗರದ ಬಿಬಿಎಂಪಿ ನಿವೇಶನದಲ್ಲಿ ಡಾ: ಜಗಜೀವನ ರಾಂ ಲಿಡಕರ್ ಭವನ ನಿರ್ಮಾಣ ಮಾಡುವುದು.**<br>(ಸುಮಾರು 5,000 ಚದರ ಅಡಿ ವಿಸ್ತೀರ್ಣವುಳ್ಳ ಬಿಬಿಎಂಪಿ.ಗೆ ಸೇರಿದ ಜಾಗದಲ್ಲಿ ಇದ್ದ ಶೆಡ್ ನಿಗಮದ ಸ್ವಾಧೀನದಲ್ಲಿದ್ದು ಇದನ್ನು ನಿಗಮದ ಹೆಸರಿಗೆ ಕ್ರಯಕ್ಕೆ ಮಾಡಿಸಿಕೊಳ್ಳಲಾಗಿದೆ. ಈ ಜಾಗದಲ್ಲಿ ನಿಗಮದ ಆಡಳಿತ ಕಛೇರಿ, ಆಡಿಟೋರಿಯಂ, ಮಾರಾಟ ಮಳಿಗೆ, ಮಾಹಿತಿ ಕೇಂದ್ರ, ಮತ್ತಿತರೆ ಸೌಲಭ್ಯಗಳನ್ನು ಉಳ್ಳ ಡಾ. ಬಾಬು ಜಗಜೀವನರಾಂ ಲಿಡ್‌ಕರ್ ಭವನ ನಿರ್ಮಾಣ ಮಾಡಲಾಗುವುದು). | 40.00 | 01 | 15 |
| | 4. **ಮೈಸೂರಿನ ಸಾತಗಳ್ಳಿಯಲ್ಲಿ ಜಗಜೀವನರಾಂ ಲೆದರ್ ಕಾಂಪ್ಲೆಕ್ಸ್ ಮತ್ತು ಕೌಶಲ್ಯ ಅಭಿವೃದ್ಧಿ ಕೇಂದ್ರ ನಿರ್ಮಾಣ:**<br>(ಮೈಸೂರಿನ ಸಾತಗಳ್ಳಿಯಲ್ಲಿ ನಿಗಮವು ಹೊಂದಿರುವ 15 | 375.00 | 01 | 15-16 |

| ಕ್ರ.ಸಂ. | ಯೋಜನೆ | ಆರ್ಥಿಕ | ಭೌತಿಕ | ಪುಟ ಸಂಖ್ಯೆ |
|---|---|---|---|---|
| | ಎಕರೆ ಜಮೀನಿನಲ್ಲಿ ಈಗಾಗಲೇ 140 ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರಗಳನ್ನು ನಿರ್ಮಿಸಿಕೊಡಲಾಗಿದ್ದು, ಉಳಿದ ಜಮೀನಿನಲ್ಲಿ ಡಾ. ಬಾಬು ಜಗಜೀವನರಾಂ ಲೆದರ್ ಕಾಂಪ್ಲೆಕ್ಸ್ ಮತ್ತು ಕೌಶಲ್ಯ ಅಭಿವೃದ್ದಿ ಕೇಂದ್ರ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಈ ಕಾಂಪ್ಲೆಕ್ಸ್‌ನಲ್ಲಿ ಕುಶಲಕರ್ಮಿಗಳಿಗೆ ಮಿನಿ ವರ್ಕ್‌ಶೆಡ್ ಕಂ ಮಳಿಗೆಗಳು , ವಸತಿಗಳು, ತರಬೇತಿ ಕೇಂದ್ರ, ಡಿಸೈನ್ಸ್ ಸ್ಟುಡಿಯೋ, ಇಂಡಸ್ಟ್ರಿಯಲ್ ಶೆಡ್ಸ್, ಡಾ: ಬಾಬು ಜಗಜೀವನ ರಾಂ ಸಮುದಾಯ ಭವನ ಮತ್ತಿತರ ಸೌಲಭ್ಯಗಳನ್ನು ಒದಗಿಸಲಾಗುವುದು.) | | | |
| | 5. **ಬೆಂಗಳೂರಿನ ವಾಜರಹಳ್ಳಿ/ಕೆ.ಜಿ.ಹಳ್ಳಿ/ ಚಿಕ್ಕಬಳ್ಳಾಪುರ/ ಚಿತ್ರದುರ್ಗ ಇತರೆ ಸ್ಥಳಗಳಲ್ಲಿ ನಿಗಮವು ಹೊಂದಿರುವ ಜಾಗಗಳಲ್ಲಿ ಕುಶಲಕರ್ಮಿಗಳ ಮಳಿಗೆಗಳು/ ಸಂಕೀರ್ಣ/ ಆಡಿಟೋರಿಯಂ ಕಟ್ಟಡ ಮತ್ತು ಇತರೆ ಸ್ಥಳಗಳಲ್ಲಿರುವ ಸಿ.ಎಫ್.ಸಿ ಕಟ್ಟಡಗಳ ದುರಸ್ಥಿ ಮಾಡಿಸುವುದು.**<br>(ನಿಗಮವು ಬೆಂಗಳೂರಿನ ವಾಜರಹಳ್ಳಿ ಮತ್ತು ಕೆ.ಜಿ.ಹಳ್ಳಿ ಹಾಗೂ ರಾಜ್ಯದ ಇತರೆಡೆ ಹೊಂದಿರುವ ಜಾಗಗಳಲ್ಲಿ ಕುಶಲಕರ್ಮಿಗಳಿಗಾಗಿ ಮಳಿಗೆಗಳು, ಸಂಕೀರ್ಣ, ತರಬೇತಿ ಕೇಂದ್ರ ಮತ್ತು ಆಡಿಟೋರಿಯಂ ನಿರ್ಮಾಣ ಮಾಡಲಾಗುವುದು.) | 300.00 | 03 | 16 |
| | 6. **ನಿಗಮವು ಹೊಂದಿರುವ ಜಮೀನುಗಳಿಗೆ ಭದ್ರತೆ ದೃಷ್ಟಿಯಿಂದ ಆವರಣಗೋಡೆ ನಿರ್ಮಾಣ ಮಾಡುವುದು.**<br>(ರಾಜ್ಯದ ವಿವಿಧ ಜಿಲ್ಲೆಯ ಕೇಂದ್ರಗಳಲ್ಲಿ ಜಮೀನು ಮಂಜೂರಾಗುತ್ತಿದ್ದು, ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರ ನಿರ್ಮಾಣ ಮಾಡಲು ಬಳಸಲಾಗುವುದು. ಇಂತಹ ಜಮೀನುಗಳ ಭದ್ರತೆ ದೃಷ್ಟಿಯಿಂದ ಆವರಣಗೋಡೆ ನಿರ್ಮಾಣ ಮಾಡಲಾಗುವುದು). | 100.00 | 02 | 16 |
| | 7. **ಲಿಡಕರ್ ಸಂಕೀರ್ಣದಲ್ಲಿ ಚರ್ಮ ಕುಶಲಕರ್ಮಿಗಳಿಗೆ ಸಾಂಸ್ಕೃತಿಕ ಸಮುದಾಯ ಭವನ ನಿರ್ಮಾಣ ಮಾಡುವುದು.**<br>(ಲಿಡಕರ್ ಸ್ಥಾಪಿಸುವ ಚರ್ಮ ಕುಶಲಕರ್ಮಿಗಳ ಸಂಕೀರ್ಣಗಳಲ್ಲಿ ಅವರ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಸಮುದಾಯ ಭವನಗಳನ್ನು ನಿರ್ಮಿಸಿಕೊಡಲಾಗುವುದು. ನಿಗಮವು ತುಮಕೂರು ಜಿಲ್ಲೆಯ ಕೊರಟಗೆರೆ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಚಿತ್ರದುರ್ಗ ತಾಲ್ಲೂಕು ಮತ್ತಿತ್ತರೆ ಸ್ಥಳಗಳಲ್ಲಿ ಲಿಡಕರ್ ಸಂಕೀರ್ಣಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಲಾಗಿದೆ). | 100.00 | 02 | 16 |
| | **ಒಟ್ಟು** | **3787.00** | **1209** | |

| ಕ್ರ.ಸಂ. | ಯೋಜನೆ | ಆರ್ಥಿಕ | ಭೌತಿಕ | ಪುಟ ಸಂಖ್ಯೆ |
|---|---|---|---|---|
| VI. | **ಕಲ್ಯಾಣ ಯೋಜನೆಗಳು :**<br>1. **ವಿಮಾ ಸೌಲಭ್ಯ ಒದಗಿಸುವ ಯೋಜನೆ :**<br>(ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ ಮತ್ತು ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ ಅಡಿ ವಿಮಾ ಸೌಲಭ್ಯವನ್ನು ಕಲ್ಪಿಸಲಾಗುವುದು. ಪ್ರತಿ ವರ್ಷ ಪ್ರತಿ ಕುಶಲಕರ್ಮಿ ಬ್ಯಾಂಕ್ ಖಾತೆಗೆ ಕ್ರಮವಾಗಿ ರೂ. 330/- ಹಾಗೂ ರೂ. 12/- + ಸೇವಾ ತೆರಿಗೆ ವಿಮಾ ಕಂತನ್ನು ಜಮಾ ಮಾಡಲಾಗುವುದು. ಈ ಯೋಜನೆಗಳಡಿ ಕುಶಲಕರ್ಮಿಗಳು ಸ್ವಾಭಾವಿಕವಾಗಿ ಅಥವಾ ಅಪಘಾತದಿಂದ ಮರಣ ಹೊಂದಿದಲ್ಲಿ ರೂ. 2.00 ಲಕ್ಷದವರೆಗೆ ವಿಮೆ ಸೌಲಭ್ಯವಿರುತ್ತದೆ. (ಕಳೆದ ಸಾಲಿನ ಅನುದಾನದಲ್ಲಿ ವೆಚ್ಚವನ್ನು ಭರಿಸಲಾಗುವುದು.) | 00 | 2500 | 17 |
| | 2. **ಚರ್ಮ ಕುಶಲಕರ್ಮಿಗಳು ಮರಣ ಹೊಂದಿದಾಗ ಅಂತ್ಯ ಸಂಸ್ಕಾರದ ವೆಚ್ಚಕ್ಕಾಗಿ ಧನ ಸಹಾಯ ಒದಗಿಸುವುದು.**<br>(ಚರ್ಮಕುಶಲ ಕರ್ಮಿಗಳು ಬಡ ಕುಟುಂಬಗಳಿಗೆ ಸೇರಿದವರಾಗಿದ್ದು ಜೀವನ ನಿರ್ವಹಣೆ ಕಷ್ಟಕರವಾಗಿರುತ್ತದೆ. ಆದುದರಿಂದ ಕುಶಲಕರ್ಮಿಗಳು ಮರಣ ಹೊಂದಿದಾಗ ಅಂತ್ಯ ಸಂಸ್ಕಾರ ವೆಚ್ಚಕ್ಕಾಗಿ ರೂ. 5,000/- ಗಳನ್ನು ನೀಡಲಾಗುವುದು. (ಕಳೆದ ಸಾಲಿನ ಅನುದಾನದಲ್ಲಿ ವೆಚ್ಚವನ್ನು ಭರಿಸಲಾಗುವುದು.) | 00 | – | 17 |
| | **ಒಟ್ಟು ರೂ.** | **–** | **2500** | |
| | **ಒಟ್ಟು ರೂ. (I+II+III+IV+V)** | **4668.30** | **5431** | |
| VII. | **ನಿರ್ವಹಣಾ ವೆಚ್ಚ**<br>(ಮೇಲಿನ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಸಿಬ್ಬಂದಿ, ಸಾರಿಗೆ, ಪ್ರಯಾಣ ಮತ್ತಿತರೆ ಸಂಬಂಧಿತ ವೆಚ್ಚ ನಿರ್ವಹಣೆ ಮಾಡಲು ಅನುದಾನದ ಅವಶ್ಯಕತೆ ಇರುತ್ತದೆ. ಆದುದರಿಂದ ಒಟ್ಟು ಯೋಜನಾ ಗಾತ್ರದ ಶೇ. 7ರಷ್ಟನ್ನು ನಿರ್ವಹಣಾ ವೆಚ್ಚಕ್ಕಾಗಿ ಕಾಯ್ದಿರಿಸಲಾಗಿದೆ) | 331.70 | -- | 17-18 |
| | **ಒಟ್ಟು** | **5000.00** | **5431** | |

ಸಹಿ/-
ವ್ಯವಸ್ಥಾಪಕ ನಿರ್ದೇಶಕರು

# ಯೋಜನೆಗಳು ಮತ್ತು ವಿವರ

## I. ಚರ್ಮಕುಶಲ ಕರ್ಮಿಗಳ ಸಮೀಕ್ಷೆ :

ನಿಗಮವು ಪರಿಶಿಷ್ಟ ಜಾತಿಗೆ ಸೇರಿದ ಚರ್ಮ ಕುಶಲಕರ್ಮಿಗಳ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಹಲವು ಯೋಜನೆಗಳನ್ನು ರೂಪಿಸಿದೆ. ಆದರೆ ಪರಿಣಾಮಕಾರಿಯಾದ ಕ್ರಿಯಾ ಯೋಜನೆ ರೂಪಿಸಲು ಮತ್ತು ವೈಜ್ಞಾನಿಕವಾಗಿ ಜಿಲ್ಲಾವಾರು ಗುರಿ ನಿಗದಿಪಡಿಸುವ ನಿಟ್ಟಿನಲ್ಲಿ ರಾಜ್ಯದ್ಯಂತ ವಿವಿಧ ಜಿಲ್ಲೆಗಳಲ್ಲಿ /ತಾಲ್ಲೂಕುಗಳಲ್ಲಿ ಇರುವ ಚರ್ಮ ಕುಶಲಕರ್ಮಿ ಕುಟುಂಬಗಳ ಬಗ್ಗೆ ಮತ್ತು ಅಂತಹ ಕುಟುಂಬಗಳು ಚರ್ಮೋದ್ಯೋಗದಲ್ಲಿ ತೊಡಗಿರುವ ಬಗ್ಗೆ ನಿಖರವಾದ ಮಾಹಿತಿ ಲಭ್ಯವಿರುವುದಿಲ್ಲ. ಹಾಗೂ ವೃತ್ತಿಪರ ಚರ್ಮ ಕುಶಲಕರ್ಮಿ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಕಲ್ಪಿಸಲು ಆಗುತ್ತಿಲ್ಲ. ಈ ದಿಸೆಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಸರ್ಕಾರೇತರ ಸಂಸ್ಥೆಗಳ ಮೂಲಕ ಚರ್ಮ ಕುಶಲಕರ್ಮಿಗಳ ಜಿಲ್ಲಾ / ತಾಲ್ಲೂಕುವಾರು ಸಮೀಕ್ಷೆ / ಗಣತಿ ಮಾಡಿ ಗುರುತಿನ ಚೀಟಿ ನೀಡಲು ಉದ್ಧೇಶಿಸಿದೆ. ಈ ಸಮೀಕ್ಷೆ ಕಾರ್ಯವನ್ನು 30 ಜಿಲ್ಲೆಗಳಲ್ಲಿ ಕೈಗೊಳ್ಳಲು ರೂ. 100 ಲಕ್ಷಗಳ ಅನುದಾನವನ್ನು ಕಾಯ್ದಿರಿಸಲಾಗಿದೆ.

## II. ತರಬೇತಿ ಕಾರ್ಯಕ್ರಮಗಳು :

### 1. ಕೌಶಲ್ಯ ಅಭಿವೃದ್ಧಿ ಮತ್ತು ಆದಾಯ ಗಳಿಕೆಗಾಗಿ ತರಬೇತಿ ಶಿಬಿರ

ಕುಶಲಕರ್ಮಿಗಳ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗಾಗಿ ನಿಗಮವು ಹಮ್ಮಿಕೊಂಡಿರುವ ಯೋಜನೆಗಳ ಬಗ್ಗೆ ಅರಿವು ಮೂಡಿಸಿ ಅವರನ್ನು ಚರ್ಮೋದ್ಯಮದಲ್ಲಿ ತೊಡಗುವಂತೆ ಉತ್ತೇಜನಗೊಳಿಸಿ ಪ್ರತಿ ಕೇಂದ್ರದಲ್ಲೂ ಅವರಿಗೆ ಪಾದರಕ್ಷೆ /ಶೂ / ಲೆದರ್ ಗೂಡ್ಸ್ ಗಳ ತಯಾರಿಕೆಯಲ್ಲಿ 60 ದಿನಗಳ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲಾಗುವುದು. ಅವರ ಜೀವನೋಪಾಯಕ್ಕೆ ಅನುಕೂಲವಾಗುವಂತೆ ಗುಡಿ ಕೈಗಾರಿಕೆ ಪ್ರಾರಂಭಿಸಲು ಪ್ರತಿ ಕುಶಲಕರ್ಮಿಗೆ ಅಂದಾಜು ರೂ. 24,000/- ಬೆಲೆಯ ಯಂತ್ರೋಪಕರಣಗಳನ್ನು ಅಂದರೆ ಒಂದು ಚರ್ಮ ಹೊಲಿಗೆ ಯಂತ್ರ, ಒಂದು ಸೆಟ್ ಚಪ್ಪಲ್ / ಶೂ ಲಾಸ್ಟ್‌ಗಳು, ಮತ್ತು ಒಂದು ಆಧುನಿಕ ಉಪಕರಣ ಪೆಟ್ಟಿಗೆ ವಿತರಿಸಲು ಯೋಜಿಸಿದೆ. (ಪಾದರಕ್ಷೆ /ಶೂ ತರಬೇತಿ ಫಲಾನುಭವಿಗಳಿಗೆ). ಹಾಗೂ ಚರ್ಮ ಉತ್ಪನ್ನಗಳ ತಯಾರಿಕಾ ತರಬೇತಿ ಫಲಾನುಭವಿಗಳಿಗೆ ಒಂದು ಚರ್ಮ ಹೊಲಿಗೆ ಯಂತ್ರ ಮತ್ತು ಒಂದು ಉಪಕರಣ ಪೆಟ್ಟಿಗೆ ಮಾತ್ರ ವಿತರಿಸಲಾಗುವುದು. ಹಾಗೂ ಪ್ರತಿ ಕುಶಲಕರ್ಮಿಗೂ ಕನಿಷ್ಟ ಕೂಲಿ ಆಧಾರದ ಮೇಲೆ ರೂ. 6,000/-ಗಳ ಶಿಷ್ಯ ವೇತನ ನೀಡಲಾಗುವುದು. ಅಲ್ಲದೆ ತರಬೇತಿಯಲ್ಲಿ ತಯಾರಿಸಿದ ಉತ್ಪನ್ನಗಳನ್ನು ತರಬೇತಿ ಪಡೆದ ಕುಶಲಕರ್ಮಿಗಳಿಗೆ ಸಮನಾಗಿ ಹಂಚಿ ಮಾರಾಟ ಮಾಡಿಕೊಳ್ಳಲು ಅನುವು ಮಾಡಿಕೊಡಲಾಗುವುದು.

ಈ ತರಬೇತಿ ಶಿಬಿರಗಳಿಂದ ಕುಶಲಕರ್ಮಿಗಳನ್ನು ಗುಡಿ ಕೈಗಾರಿಕೆಗಳಾಗಿ ಪರಿವರ್ತಿಸಿ ಉದ್ಯೋಗಸ್ಥರನ್ನಾಗಿ ಮಾಡಿ, ಆದಾಯಗಳಿಸಿ ಸ್ವತಂತ್ರವಾಗಿ ಮತ್ತು ಸ್ವಾವಲಂಭಿಗಳಾಗಿ ಬದುಕಲು ಅನುವು ಮಾಡಿಕೊಟ್ಟಂತಾಗುವುದು.

ತರಬೇತಿಗಳನ್ನು ಪರಿಣಿತಿ ಹೊಂದಿದ ತರಬೇತಿ ಸಮಾಲೋಚಕರ / ಪ್ರತಿಷ್ಠಿತ ತರಬೇತಿ ಸಂಸ್ಥೆಗಳ ಮುಖಾಂತರ ಅನುಷ್ಠಾನಗೊಳಿಸಲು ಯೋಜಿಸಿದೆ. ರಾಜ್ಯಾದ್ಯಂತ 30 ಪಾದರಕ್ಷೆ/ ಶೂ /ಚರ್ಮ ವಸ್ತುಗಳ ತಯಾರಿಕಾ ತರಬೇತಿ ಶಿಬಿರಗಳನ್ನು ನಡೆಸಲು ಯೋಜಿಸಲಾಗಿದ್ದು, ಒಂದು ತಂಡದಲ್ಲಿ 30 ಕುಶಲಕರ್ಮಿಗಳಂತೆ ಒಟ್ಟು 900 ಕುಶಲಕರ್ಮಿಗಳಿಗೆ ತರಬೇತಿ ನೀಡಲು ಉದ್ದೇಶಿಸಿದೆ.

**ವೆಚ್ಚದ ವಿವರಗಳು ಕೆಳಕಂಡಂತಿವೆ : –**

ಎ) ತರಬೇತಿ :

ಅ. ಉದ್ದೇಶಿತ ಗುಂಪು – 30 ಕುಶಲಕರ್ಮಿಗಳ ಒಂದು ತಂಡ

ಆ. ತರಬೇತಿ ನೀಡಲು ಉದ್ದೇಶಿಸಿರುವ ತಂಡಗಳ ಸಂಖ್ಯೆ – ಒಂದು ಶಿಬಿರಕ್ಕೆ 30 ಕುಶಲಕರ್ಮಿಗಳಂತೆ 30 ಶಿಬಿರಗಳು.

ಇ. ತರಬೇತಿ ನೀಡಲು ಉದ್ದೇಶಿಸಿರುವ ಒಟ್ಟು ಕುಶಲಕರ್ಮಿಗಳ ಸಂಖ್ಯೆ – 30 x 30 = 900

ಈ. ತರಬೇತಿ ಅವಧಿ – 60 ದಿನಗಳು.

**ಉ. ತರಬೇತಿ ವೆಚ್ಚ:** **(ರೂ. ಗಳಲ್ಲಿ)**

| ಕ್ರ ಸಂ | ವಿವರಗಳು | ಪಾದರಕ್ಷೆ ತರಬೇತಿ (ಪುರುಷರಿಗೆ) | ಚರ್ಮ ಉತ್ಪನ್ನಗಳ ತರಬೇತಿ (ಮಹಿಳೆಯರಿಗೆ) |
|---|---|---|---|
| 1 | 30 ಕುಶಲಕರ್ಮಿಗಳ ಒಂದು ತಂಡಕ್ಕೆ ತರಬೇತಿ ನೀಡಲು ಅವಶ್ಯವಿರುವ ಕಚ್ಚಾಮಾಲಿನ ವೆಚ್ಚ – ಪಾದರಕ್ಷೆ ತರಬೇತಿ. (ರೂ. 300 x 10 ಜೊತೆ ಪುರುಷರ / ಹೆಂಸಗರ ಪಾದರಕ್ಷೆ / 10 ಚರ್ಮ ವಸ್ತುಗಳು ಅಥವಾ 05 ಜೊತೆ ಶೂಗಳು x 600 x 30 ಕುಶಲಕರ್ಮಿಗಳು) | 90,000/– | ––––– |
| | ಕಚ್ಚಾ ಮಾಲು ವೆಚ್ಚ:– ಚರ್ಮ ಉತ್ಪನ್ನಗಳ ತರಬೇತಿ ಓವಲ್ ಶೇಫ್ ಕಾಯಿನ್ ಪರ್ಸ್, ಸ್ಕ್ವೇರ್ ಶೇಫ್ ಕಾಯಿನ್ ಪರ್ಸ್, ಮಹಿಳೆಯರ ದೊಡ್ಡ ಕಾಯಿನ್ ಪರ್ಸ್, ಪುರುಷರ ವ್ಯಾಲೆಟ್ (ಒಂದು ಫೋಲ್ಡರ್), ಪುರುಷರ ವ್ಯಾಲೆಟ್ (ಎರಡು ಫೋಲ್ಡರ್) ಮತ್ತು ಮಹಿಳೆಯರ ವ್ಯಾನಿಟಿ ಬ್ಯಾಗ್ (ಒಂದು ಕಂಪಾರ್ಟಮೆಂಟ್ ಮತ್ತು ಒಂದು ಹೊರಗಿನ ಪಾಕೆಟ್) – 60 ದಿನಗಳಲ್ಲಿ ಪ್ರತಿ ಉತ್ಪನ್ನವನ್ನು ನಾನ್ ಲೆದರ್‌ನಲ್ಲಿ 03 ಮತ್ತು ಲೆದರ್‌ನಲ್ಲಿ ಒಂದರಂತೆ ತಯಾರಿಸಲು | ––––– | 90,000/– |
| 2 | ಕುಶಲಕರ್ಮಿಗಳ ಶಿಷ್ಯ ವೇತನ (60 ದಿನಗಳಿಗೆ) (ರೂ. 6,000/– x 30 )– ಶೇ 75 ರಷ್ಟು ಹಾಜರಾತಿ ಖಡ್ಡಾಯ. | 1,80,000/– | 1,80,000/– |
| 3 | ಒಬ್ಬ ಕುಶಲಕರ್ಮಿಗೆ ಒಂದು ಚರ್ಮ ಹೊಲಿಗೆ ಯಂತ್ರ ಒದಗಿಸುವ ವೆಚ್ಚ (ರೂ. 16,000/– x 30) | 4,80,000/– | 4,80,000/– |

| | | | |
|---|---|---|---|
| 4 | ಒಬ್ಬ ಕುಶಲಕರ್ಮಿಗೆ ಒಂದು ಸೆಟ್ ಚಪ್ಪಲ್ /ಶೂ ಲಾಸ್ಟ್‌ಗಳನ್ನು ಒದಗಿಸುವ ವೆಚ್ಚ (ರೂ. 650/- x 5 ವಿವಿಧ ಅಳತೆಗಳ ಲಾಸ್ಟಗಳು) | 97,500/ - | 0000 |
| 5 | ಪ್ರತಿ ಕುಶಲಕರ್ಮಿಗೆ ಆಧುನಿಕ ಸುಧಾರಿತ ಸಲಕರಣೆಗಳ ಕಿಟ್ ಒದಗಿಸುವ ವೆಚ್ಚ. (ರೂ. 4000/- x 30) | 1,20,000/- | 1,20,000/- |
| 6 | ತರಬೇತಿ ಸಮಾಲೋಚಕರ ವೆಚ್ಚ - 60 ದಿನಗಳಿಗೆ ಟಿ.ಎ.&ಡಿ.ಎ ಸೇರಿ | 30,000/- | 30,000/- |
| 7 | ಕುಶಲಕರ್ಮಿಗಳು ಒಪ್ಪುವ ಒಬ್ಬ ಹಿರಿಯ ಕುಶಲಕರ್ಮಿಯನ್ನು ಸಹಾಯಕ ಭೋದಕರನ್ನಾಗಿ ನೇಮಿಸಿಕೊಳ್ಳುವ ವೆಚ್ಚ | 10,000/- | 10,000/- |
| 8 | ತರಬೇತಿ ಶಿಬಿರದಲ್ಲಿ ಸ್ವಚ್ಚತೆ ಕಾಪಾಡಲು ಒಬ್ಬ ಅನುಚರರ ವೆಚ್ಚ | 5000/- | 5000/- |
| 9 | ಪ್ರಥಮ ಚಿಕಿತ್ಸಾ ಪೆಟ್ಟಿಗೆ ಅಳವಡಿಸುವ ವೆಚ್ಚ | 1,000/- | 1,000/- |
| 10 | ತರಬೇತಿ ಶಿಬಿರದಲ್ಲಿ<br>ಅ) ಟೀ/ಕಾಫಿ (ರೂ. 10 x 30 x 60)<br>ಆ) ನೀರು ಒದಗಿಸುವ ವೆಚ್ಚ (ರೂ. 40 x 60)<br>(ಮಿನರಲ್ ನೀರಿನ ವೆಚ್ಚ ಒಂದು ಕ್ಯಾನ್‌ಗೆ ರೂ. 40.00) | 18,000/-<br>2,400/- | 18,000/-<br>2,400/- |
| 11 | ತರಬೇತಿ ಆಯೋಜಿಸುವ ವೆಚ್ಚ | 30,000/- | 30,000/- |
| 12 | ತರಬೇತಿಗೆ ಅವಶ್ಯವಿರುವ ಇತರೆ ವೆಚ್ಚಗಳು | 25,000/- | 25,000/- |
| | ಒಟ್ಟು ವೆಚ್ಚ ರೂ. | **10,88,900/-** | **9,91,400/-** |

15 ಶಿಬಿರ (ಪಾದರಕ್ಷೆ ತರಬೇತಿ) x ರೂ. 1,088,900 = 1,63,33,500/-

30 ಶಿಬಿರ(ಚರ್ಮ ಉತ್ಪನ್ನಗಳು) x ರೂ. 9,91,400 = 1,48,71,000/-

**ಒಟ್ಟು ರೂ. = 3,12,04,500/-**

ವಿಶೇಷ ಟಿಪ್ಪಣಿ : ಅ. ತರಬೇತಿಯಲ್ಲಿ ತಯಾರಿಸಲಾದ ಕಚ್ಚಾ ಪಾದರಕ್ಷೆಗಳನ್ನು/ಚರ್ಮ ಉತ್ಪನ್ನಗಳನ್ನು ತರಬೇತಿಯಲ್ಲಿ ಪಾಲ್ಗೊಂಡ ಫಲಾನುಭವಿಗಳು ಪ್ರತಿಯೊಬ್ಬರು ಎಷ್ಟು ಪ್ರಮಾಣದಲ್ಲಿ ತಯಾರಿಸಿರುತ್ತಾರೊ ಅಷ್ಟು ಪ್ರಮಾಣವನ್ನು ಅವರಿಗೆ ವಿತರಿಸಲಾಗುವುದು.

<u>ತರಬೇತಿಗಳನ್ನು ನಡೆಸಲು ಉದ್ದೇಶಿಸಿರುವ ಸ್ಥಳಗಳು</u> :

| ಕ್ರ.ಸಂ. | ತರಬೇತಿ ಸ್ಥಳಗಳು | ಪಾದರಕ್ಷೆ ತರಬೇತಿ ಶಿಬಿರಗಳ ಸಂಖ್ಯೆ (ಪುರುಷರಿಗೆ ಮಾತ್ರ) | ಚರ್ಮ ಉತ್ಪನ್ನಗಳ ತರಬೇತಿ ಶಿಬಿರಗಳ ಸಂಖ್ಯೆ(ಮಹಿಳೆಯರಿಗೆ) | ಒಟ್ಟು ಕುಶಲ ಕರ್ಮಿಗಳ ಸಂಖ್ಯೆ |
|---|---|---|---|---|
| 01 | ಬೆಂಗಳೂರು ನಗರ ಜಿಲ್ಲೆ | -- | 1 x 30 | 30 |
| 02 | ಬೆಂಗಳೂರು ಗ್ರಾಮಾಂತರ ಜಿಲ್ಲೆ | 1 x 30 | -- | 30 |
| 03 | ಚಿಕ್ಕಬಳ್ಳಾಪುರ | 1 x 30 | -- | 30 |
| 04 | ಚಿತ್ರದುರ್ಗ ಜಿಲ್ಲೆ | 1 x 30 | 1 x 30 | 60 |
| 06 | ಮೈಸೂರು | 1 x 30 | -- | 30 |
| 06 | ಹಾವೇರಿ ಜಿಲ್ಲೆ | 1 x 30 | -- | 30 |
| 07 | ಬೆಳಗಾವಿ ಜಿಲ್ಲೆ | -- | 1 x 30 | 30 |
| 08 | ಬೀದರ್ ಜಿಲ್ಲೆ | 1 x 30 | -- | 30 |
| 09 | ದಾವಣಗೆರೆ ಜಿಲ್ಲೆ | 1 x 30 | -- | 30 |
| 10 | ಧಾರವಾಡ ಜಿಲ್ಲೆ | -- | 1 x 30 | 30 |
| 11. | ಹಾಸನ ಜಿಲ್ಲೆ | 1 x 30 | -- | 30 |
| 12 | ಕೋಲಾರ | 1 x 30 | -- | 30 |
| 13 | ಬಾಗಲಕೋಟೆ | -- | 1 x 30 | 30 |
| 14 | ಗದಗ | 1 x 30 | -- | 30 |
| 15 | ತುಮಕೂರು | -- | 1 x 30 | 30 |
| 16 | ರಾಮನಗರ | 1 x 30 | -- | 30 |
| 17 | ಕಲಬುರ್ಗಿ | 1 x 30 | -- | 30 |
| 18 | ಕೊಪ್ಪಳ | -- | -- | -- |
| 19 | ಬಳ್ಳಾರಿ | -- | 1 x 30 | 30 |
| 20 | ಮಂಡ್ಯ | -- | 1 x 30 | 30 |
| 21 | ಶಿವಮೊಗ್ಗ | 3 x 30 | 2 x 30 | 150 |
| 22 | ಚಿಕ್ಕಮಗಳೂರು | --- | -- | -- |
| 23 | ವಿಜಯಪುರ | 1 x 30 | -- | 30 |
| 24 | ಉತ್ತರ ಕನ್ನಡ | -- | -- | -- |
| 25 | ರಾಯಚೂರು | 1 x 30 | -- | 30 |
| 26 | ಚಾಮರಾಜನಗರ | -- | 1 x 30 | 30 |
| 27 | ಯಾದಗಿರಿ | 1 x 30 | -- | 30 |
| 28 | ದಕ್ಷಿಣ ಕನ್ನಡ | --- | -- | -- |
| 29 | ಉಡುಪಿ | --- | -- | -- |
| 30 | ಕೊಡಗು | --- | 1 x 30 | 30 |
| | ಒಟ್ಟು | 18 x 30 | 12 x 30 | 900 |

## 2. ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಕೌಶಲ್ಯ ವೃದ್ಧಿ ಯೋಜನೆ :

ರಾಜ್ಯದಲ್ಲಿನ ಚರ್ಮೋದ್ಯಮದ ಬೆಳವಣಿಗೆ ದೃಷ್ಟಿಯಿಂದ ಆಧುನಿಕ ತಾಂತ್ರಿಕತೆಯಲ್ಲಿ ಪರಿಣಿತಿ ಹೊಂದಿದ ಮಾನವ ಸಂಪನ್ಮೂಲದ ಅವಶ್ಯಕತೆ ಇದ್ದು, ಇಂತಹ ಸಂಪನ್ಮೂಲವನ್ನು ಅಭಿವೃದ್ಧಿಪಡಿಸಲು ಚರ್ಮೋದ್ಯಮದಲ್ಲಿ ತೊಡಗಿರುವ ಮತ್ತು ಶಾಲೆ ಬಿಟ್ಟ ಅಂದರೆ ಪಿ.ಯು.ಸಿ. ಅಥವಾ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಅಥವಾ ಉತ್ತೀರ್ಣರಾಗದೇ ಉಳಿದ 20–30 ವರ್ಷ ವಯೋಮಿತಿಯುಳ್ಳ ಪರಿಶಿಷ್ಟ ಜಾತಿಯ ಯುವಕ / ಯುವತಿಯರು ಮತ್ತು ಪದವಿ / ಹೆಚ್ಚಿನ ವಿದ್ಯಾರ್ಹತೆ ಗಳಿಸಿ ನಿರುದ್ಯೋಗಿಗಳಾಗಿರುವ 30 ವರ್ಷ ದಾಟಿರುವ ಪರಿಶಿಷ್ಟ ಜಾತಿಯ ಯುವಕ / ಯುವತಿಯರನ್ನು [ಮಾದಿಗ, ಸಮಗಾರ, ಢೋರ, ದಂಡೋರ, ಮೋಚಿ ಮತ್ತಿತರೆ ಚರ್ಮ ಕುಶಲಕರ್ಮಿಗಳ ಕುಟುಂಬದಿಂದ ಬಂದ ಅಭ್ಯರ್ಥಿಗಳು] ಪ್ರತಿಷ್ಠಿತ ತರಬೇತಿ ಸಂಸ್ಥೆಗಳಾದ ಸಿ.ಎಫ್.ಟಿ.ಐ., ಅಥವಾ ಸಿ.ಎಲ್.ಆರ್.ಐ., ಚೆನ್ನೈ ಅಥವಾ ಎಫ್.ಡಿ.ಡಿ.ಐ. ನೋಯಿಡಾ ಅಥವಾ ಕರ್ನಾಟಕ ಚರ್ಮ ತಾಂತ್ರಿಕ ಸಂಸ್ಥೆ, ಬೆಂಗಳೂರು ಇಲ್ಲಿ ನಡೆಸುತ್ತಿರುವ ಒಂದು ವರ್ಷದ ಸರ್ಟಿಫಿಕೇಟ್ ಕೋರ್ಸ್, ಹಾಗೂ 18 ತಿಂಗಳ ಹೈಯರ್ ಪಿ.ಜಿ ಡಿಪ್ಲೋಮಾ ಇನ್ ಪುಟ್‌ವೇರ್ ಮ್ಯಾನುಪ್ಯಾಕ್ಚರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಪ್ರೋಗ್ರಾಂಗೆ (ಆರು ವಾರಗಳ ಕಾಲ ಲಂಡನ್‌ನಲ್ಲಿ ತರಬೇತಿ ಸೇರಿ) ಕಳುಹಿಸಲು ಮತ್ತು ಕರ್ನಾಟಕ ಚರ್ಮ ತಾಂತ್ರಿಕ ಸಂಸ್ಥೆಯವರು ನಡೆಸುತ್ತಿರುವ 3 ವರ್ಷದ ಡಿಪ್ಲೋಮಾ ಇನ್ ಲೆದರ್ ಟೆಕ್ನಾಲಜಿ ಕೋರ್ಸ್‌ಗೆ ನಿಯೋಜಿಸಲು ಉದ್ದೇಶಿಸಲಾಗಿದೆ. ಇಂತಹ ತರಬೇತಿಗಳನ್ನು ಪಡೆದ ಯುವಕ/ಯುವತಿಯರು ಮುಂದೆ ಸಾಂಪ್ರದಾಯಿಕ ಕುಶಲಕರ್ಮಿಗಳಿಗೆ ಮತ್ತು ಸ್ವಸಹಾಯ ಗುಂಪುಗಳಿಗೆ ತಾಂತ್ರಿಕತೆ ಮತ್ತು ತಯಾರಿಕಾ ತಂತ್ರಜ್ಞಾನದಲ್ಲಿ ಮಾರ್ಗದರ್ಶನ ಮಾಡಲು / ತರಬೇತಿ ನೀಡಲು ತಯಾರಾದಂತಾಗುತ್ತದೆ. ಇಂತಹ ಕೋರ್ಸುಗಳನ್ನು ಮುಗಿಸಿದ ಅಭ್ಯರ್ಥಿಗಳನ್ನು ನಿಗಮದ ತರಬೇತಿದಾರರ ಪ್ಯಾನಲ್‌ನಲ್ಲಿ ಇಟ್ಟುಕೊಳ್ಳಲಾಗುವುದು. ಅಲ್ಲದೆ ತಾಂತ್ರಿಕ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಗೊಳಿಸುವುದರಿಂದ ಚರ್ಮೋದ್ಯಮದಲ್ಲಿ ತೊಡಗಿರುವ ಇತರೆ ಸಂಸ್ಥೆಗಳು ಸಹಾ ಇವರ ಸೇವೆಯನ್ನು ಪಡೆಯಲು ಅನುಕೂಲವಾಗುತ್ತದೆ. ಆದುದರಿಂದ ಈ ಯೋಜನೆಯನ್ನು ರೂಪಿಸಲಾಗಿದೆ.

ಈ ಯೋಜನೆಯಡಿ ತರಬೇತಿಗೆ ನಿಯೋಜನೆ ಹೊಂದಿದ ಫಲಾನುಭವಿಗಳಿಗೆ ಪ್ರತಿ ತಿಂಗಳು ರೂ. 1000/– ರಿಂದ 2000/– ದಷ್ಟು ಶಿಷ್ಯ ವೇತನ ನೀಡಲಾಗುವುದು. ತರಬೇತಿ ಮುಗಿದ ನಂತರ ಕುಶಲತೆಯನ್ನು ಬಳಸಿಕೊಂಡು ಸ್ವಾವಲಂಬಿ ಜೀವನ ಸಾಗಿಸಲು ಅನುಕೂಲವಾಗುವುದು.

**ಯೋಜನೆ ಮತ್ತು ವೆಚ್ಚದ ವಿವರಗಳು:–**

**1. ಪ್ರಸ್ತಾಪಿತ ಕೋರ್ಸುಗಳು:**

ಅ. **One year Certificate Course in Footwear Manufacturing / Leather Goods manufacturing. (Minimum Qualification : SSLC Pass)**

ಆ. **18 Months Higher Diploma course in Footwear Manufacturing and Management Studies including 06 Week training in London. (Minimum Qualification : Any Degree)**

ಇ. **3 years Diploma course in Leather Technology. (Minimum Qualification : SSLC / PUC Pass)**

ಮೇಲ್ಕಂಡ ಕೋರ್ಸುಗಳಿಗೆ ಎಲ್ಲಾ ಜಿಲ್ಲೆಗಳಿಂದ ಸೇರಿ ಒಟ್ಟು 30+15+30 = 75 ಅಭ್ಯರ್ಥಿಗಳನ್ನು ನಿಯೋಜಿಸಲು ಉದ್ದೇಶಿಸಲಾಗಿದೆ. (ವಿವರ ಕೆಳಕಂಡಂತಿದೆ.)

**2. ಪ್ರಸ್ತಾಪಿತ ವೆಚ್ಚದ ವಿವರಗಳು :–**

| ಕ್ರ.ಸಂ. | ವೆಚ್ಚದ ವಿವರ | ಮೊತ್ತ |
|---|---|---|
| 1 | ಕೋರ್ಸ್ ಫೀ ಊಟ ವಸತಿ ಸೇರಿ (ರೂ. 90,000 x 30)<br>**One year Certificate Course** | 27,00,000/– |
| 2 | ಶಿಷ್ಯ ವೇತನ(ರೂ. 1,000 x 30 x 12 ತಿಂಗಳು) | 3,60,000/– |
| 3 | ಕೋರ್ಸ್ ಫೀ ಊಟ ವಸತಿ ಸೇರಿ (ರೂ. 5,50,000 x 15)<br>**18 Months Higher Diploma course in Footwear Manufacture and Management Studies** | 82,50,000/– |
| 4 | ಶಿಷ್ಯ ವೇತನ(ರೂ. 2000 x 15 x 18 ತಿಂಗಳು) | 5,40,000/– |
| 5 | ಕೋರ್ಸ್ ಫೀ, ಊಟ & ವಸತಿ ಸೇರಿ (ಪ್ರತಿ ಅಭ್ಯರ್ಥಿಗೆ ರೂ. 80,000/– x 30)<br>**3 years Diploma course in Leather Technology** | 24,00,000/– |
| 6 | ಪ್ರಯಾಣ ವೆಚ್ಚ ಮತ್ತು ಇತರೆ ವೆಚ್ಚ (ರೂ. 2000 x 75) | 1,50,000/– |
| | **ಒಟ್ಟು ರೂ** | **144,00,000/–** |

ಈ ಯೋಜನೆಯಡಿ 75 ಅಭ್ಯರ್ಥಿಗಳನ್ನು ನಿಯೋಜಿಸಲು ರೂ. 144.00/–ಲಕ್ಷಗಳನ್ನು ವೆಚ್ಚ ಮಾಡುವ ಅವಶ್ಯಕತೆಯಿರುತ್ತದೆ.

## III. ಸ್ವಯಂ ಉದ್ಯೋಗ ಯೋಜನೆಗಳು :

**(ಉತ್ಪಾದನೆ ಮತ್ತು ಮಾರುಕಟ್ಟೆ ವಿಧಿ ವಿಧಾನಗಳ ಲಿಂಕೇಜ್, ಮಾರುಕಟ್ಟೆ ಬೆಂಬಲ ಒದಗಿಸುವುದು, ಔದ್ಯೋಗಿಕರಣ ಅಭಿವೃದ್ಧಿ ಮತ್ತು ಕುಶಲಕರ್ಮಿಗಳಿಂದ ನೇರವಾಗಿ ಗ್ರಾಹಕರಿಗೆ ಉತ್ಪನ್ನಗಳನ್ನು ತಲುಪಿಸುವ ವ್ಯವಸ್ಥೆ)**

**1. ಗ್ರಾಮ /ಹೋಬಳಿ/ ಪಟ್ಟಣ ಪಂಚಾಯಿತಿ ಪ್ರದೇಶದ ಕುಶಲಕರ್ಮಿಗಳಿಗೆ ಆಧುನಿಕ ಚರ್ಮಕಾರರ ಕುಟೀರ ಒದಗಿಸುವುದು**

ಗ್ರಾಮ /ಹೋಬಳಿ/ ಪಟ್ಟಣ ಪಂಚಾಯಿತಿ ಪ್ರದೇಶದಗಳಲ್ಲಿ ಚರ್ಮ ಕೈಗಾರಿಕೆಯಲ್ಲಿ ತೊಡಗಿರುವ ಪರಿಶಿಷ್ಟ ಜಾತಿಯ ಕುಶಲಕರ್ಮಿಗಳು ಅವರು ತಯಾರಿಸಿದ ಉತ್ಪನ್ನಗಳನ್ನು ಮಾರಾಟ ಮಾಡಿ ಆದಾಯ ಗಳಿಸಲು ಅನುವಾಗುವಂತೆ ಮತ್ತು ಪರಿಶಿಷ್ಟ ಜಾತಿಯ ನುರಿತ ಹಾಗೂ ತರಬೇತಿ ಪಡೆದ ಕುಶಲಕರ್ಮಿಗಳು ತಮ್ಮ ಜೀವನದ ನಿರ್ವಹಣೆಗಾಗಿ ರಸ್ತೆಬದಿಯಲ್ಲಿ ಗೌರವಯುತವಾಗಿ ಕುಳಿತು ಪಾದರಕ್ಷೆ ತಯಾರಿಕೆ ಮತ್ತು ದುರಸ್ತಿ ಕೆಲಸಗಳನ್ನು ಮಾಡಲು ಅನುವಾಗುವಂತೆ ಆಧುನಿಕ ವಿನ್ಯಾಸದ ಚರ್ಮಕಾರರ ಕುಟೀರಗಳನ್ನು ಒದಗಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ

ಈ ಹಿನ್ನೆಲೆಯಲ್ಲಿ 2017-18ನೇ ಸಾಲಿನಲ್ಲಿ ಪ್ರತಿ ಜಿಲ್ಲೆಗೆ ಕನಿಷ್ಟ ಪಕ್ಷ 10 ಕುಶಲಕರ್ಮಿಗಳಿಗೆ ಒಟ್ಟು 30 ಜಿಲ್ಲೆಗಳಿಂದ 300 ಕುಶಲಕರ್ಮಿಗಳಿಗೆ ಆಧುನಿಕ ಚರ್ಮಕಾರರ ಕುಟೀರಗಳನ್ನು ವಿತರಿಸಲು ಉದ್ದೇಶಿಸಿದೆ. ಜೊತೆಗೆ ಒಂದು ಉಪಕರಣ ಪೆಟ್ಟಿಗೆಯನ್ನು ಉಚಿತವಾಗಿ ವಿತರಿಸಲಾಗುವುದು.

## ಯೋಜನಾ ವೆಚ್ಚ

**ಒಂದು ಕಬ್ಬಿಣದ ಚರ್ಮಕಾರರ ಕುಟೀರದ ತಯಾರಿಕಾ ವೆಚ್ಚ ರೂ. 70,000=00**

| | | ವಂತಿಗೆ | ಅನುದಾನ |
|---|---|---|---|
| ಅ | ಶೇಕಡ 90 ರಷ್ಟು ಅನುದಾನ | -- | 63000-00 |
| ಆ | ಶೇಕಡ 10 ರಷ್ಟು ಕುಶಲಕರ್ಮಿಯು ಭರಿಸಬೇಕಾದ ವಂತಿಗೆ ಹಣ | 7,000/- | --- |
| ಇ | ಉಪಕರಣ ಪೆಟ್ಟಿಗೆ, | -- | 3,600 -00 |
| * ಇದರಲ್ಲಿ ಸಾಗಾಣಿಕೆ ವೆಚ್ಚವು ಸೇರಿದೆ | | | 00000 |
| ಒಟ್ಟು ರೂ. | | 7,000/- | 66,600-00 |

**ರೂ. 66600/- ಅನುದಾನ x 300 ಫಲಾನುಭವಿಗಳು = ರೂ. 199.80 ಲಕ್ಷಗಳು**

## ಜಿಲ್ಲಾವಾರು ಗುರಿ ಕೆಳಕಂಡಂತಿರುತ್ತದೆ : (ಆಧುನಿಕ ಚರ್ಮಕಾರರ ಕುಟೀರಗಳು) ರೂ. ಲಕ್ಷಗಳಲ್ಲಿ

| ಕ್ರ.ಸಂ. | ಜಿಲ್ಲೆ | ಗುರಿ | |
|---|---|---|---|
| | | ಭೌತಿಕ | ಆರ್ಥಿಕ |
| 01 | ಬೆಂಗಳೂರು ನಗರ ಜಿಲ್ಲೆ | 10 | 6.66 |
| 02 | ಬೆಂಗಳೂರು ಗ್ರಾಮಾಂತರ ಜಿಲ್ಲೆ | 10 | 6.66 |
| 03 | ಮೈಸೂರು ಜಿಲ್ಲೆ | 15 | 9.99 |
| 04 | ಧಾರವಾಡ | 10 | 6.66 |
| 05 | ವಿಜಯಪುರ | 10 | 6.66 |
| 06 | ಬೆಳಗಾವಿ | 15 | 9.99 |
| 07 | ಉತ್ತರ ಕನ್ನಡ | 05 | 3.33 |
| 08 | ದಕ್ಷಿಣ ಕನ್ನಡ | 05 | 3.33 |
| 09 | ಉಡುಪಿ | 05 | 3.33 |
| 10 | ಶಿವಮೊಗ್ಗ | 10 | 6.66 |
| 11 | ಚಿಕ್ಕಮಗಳೂರು | 05 | 3.33 |
| 12 | ಚಿತ್ರದುರ್ಗ | 15 | 9.99 |
| 13 | ದಾವಣಗೆರೆ | 10 | 6.66 |
| 14 | ಹಾವೇರಿ | 10 | 6.66 |
| 15 | ಗದಗ | 10 | 6.66 |
| 16 | ಬಾಗಲಕೋಟೆ | 10 | 6.66 |
| 17 | ರಾಯಚೂರು | 10 | 6.66 |
| 18 | ಬೀದರ್ | 15 | 9.99 |
| 19 | ಬಳ್ಳಾರಿ | 10 | 6.66 |
| 20 | ಕಲಬುರ್ಗಿ | 10 | 6.66 |
| 21 | ಯಾದಗಿರಿ | 10 | 6.66 |
| 22 | ಕೊಪ್ಪಳ | 10 | 6.66 |
| 23 | ಕೋಲಾರ | 10 | 6.66 |
| 24 | ಚಿಕ್ಕಬಳ್ಳಾಪುರ | 10 | 6.66 |
| 25 | ಹಾಸನ | 10 | 6.66 |
| 26 | ಮಂಡ್ಯ | 10 | 6.66 |
| 27 | ಕೊಡಗು | 05 | 3.33 |
| 28 | ರಾಮನಗರ | 10 | 6.66 |
| 29 | ತುಮಕೂರು | 15 | 9.99 |
| 30 | ಚಾಮರಾಜನಗರ | 10 | 6.66 |
| | **ಒಟ್ಟು** | **300** | **199.80** |

**ಟಿಪ್ಪಣಿ :**

1. ನಿಗದಿಪಡಿಸಿದ ಗುರಿಗಳನ್ನು ಸ್ಥಳಾವಕಾಶ ಲಭ್ಯವಿಲ್ಲದೆ ಸಾಧಿಸಲು ಆಗದಿದ್ದಲ್ಲಿ ಸರ್ಕಾರದ ಸಹಾಯ ಪಡೆಯುವ ಮೂಲಕ ಬೇರೆ ಜಿಲ್ಲೆಗಳಲ್ಲಿ ಜಾಗ ದೊರೆತಲ್ಲಿ ಅಂತಹ ಜಿಲ್ಲೆಗಳಿಗೆ ಗುರಿಯನ್ನು ಹೆಚ್ಚಿಸಲು / ಕಡಿಮೆ ಮಾಡಲು ವ್ಯವಸ್ಥಾಪಕ ನಿರ್ದೇಶಕರವರು ಕ್ರಮಕೈಗೊಳ್ಳುವುದು.
2. ಯಾವುದೇ ಜಿಲ್ಲೆಯಲ್ಲಿ ಕುಶಲಕರ್ಮಿಗಳು ಮುಂದೆ ಬಾರದೆ ಗುರಿ ಸಾಧಿಸದೆ ಉಳಿದಲ್ಲಿ ಅಂತಹ ಜಿಲ್ಲೆಗಳಿಂದ ಬೇಡಿಕೆ ಇರುವ ಇತರೆಡೆ ಕುಟೀರಗಳನ್ನು ವಿತರಿಸಿ ಗುರಿಯನ್ನು ಸಾಧಿಸಬಹುದಾಗಿದೆ. ಈ ಕ್ರಮ ತೆಗೆದುಕೊಳ್ಳುವ ಮುನ್ನ ವ್ಯವಸ್ಥಾಪಕ ನಿರ್ದೇಶಕರವರು ಮಂಡಳಿ ಅನುಮೋದನೆ ಪಡೆಯುವುದು.

**2. ತರಬೇತಿ ಹೊಂದಿದ ಪರಿಶಿಷ್ಟ ಜಾತಿ ಯುವಕ / ಯುವತಿಯರಿಗೆ ನೇರ ಮಾರಾಟ ಮಳಿಗೆಗಳನ್ನು ಪ್ರಾರಂಭಿಸಲು ಧನ ಸಹಾಯ ಒದಗಿಸುವ ಯೋಜನೆ:–**

ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಕೌಶಲ್ಯವೃದ್ಧಿ ಯೋಜನೆ, ಕೌಶಲ್ಯ ಅಭಿವೃದ್ಧಿ ಮತ್ತು ಆದಾಯ ಗಳಿಕೆಗಾಗಿ ತರಬೇತಿ ಶಿಬಿರ ಹಾಗೂ ಮಹಿಳಾ ಕುಶಲಕರ್ಮಿಗಳಿಗೆ ಉದ್ಯಮ ಶೀಲತೆ ಮತ್ತು ಕೌಶಲ್ಯ ವೃದ್ಧಿ ಯೋಜನೆಗಳಡಿ ತರಬೇತಿ ಪಡೆದ/ಪಡೆಯುವ ಪರಿಶಿಷ್ಟ ಜಾತಿ ಯುವ ಕುಶಲಕರ್ಮಿಗಳು ನಿರುದ್ಯೋಗಿಗಳಾಗದೆ ಅವರು ಪಡೆದಿರುವ ಕುಶಲತೆಯನ್ನು ಬಳಸಿಕೊಂಡು ಉತ್ತಮ ಗುಣಮಟ್ಟದ ಶೂ/ ಚಪ್ಪಲಿ/ ಇತರೆ ಚರ್ಮವಸ್ತುಗಳನ್ನು ತಯಾರಿಸಿ ಮಾರಾಟ ಮಾಡಲು ಅನುವಾಗುವಂತೆ ಅವರಿಗೆ ಮಾರುಕಟ್ಟೆ ಬೆಂಬಲ ಒದಗಿಸುವ ಅವಶ್ಯಕತೆ ಇರುತ್ತದೆ. ತರಬೇತಿ ಪಡೆದ ಕುಶಲಕರ್ಮಿಗಳಿಗೆ ರಸ್ತೆಬದಿ ಹೊರತುಪಡಿಸಿ ಗೌರವ ಯುತವಾಗಿ ಸ್ವಯಂ ಉದ್ಯೋಗದಲ್ಲಿ ತೊಡಗಿಕೊಳ್ಳಲು ಮಳಿಗೆಗಳ ಅವಶ್ಯಕತೆ ಇರುತ್ತದೆ. ಅಲ್ಲದೆ ಗ್ರಾಹಕರನ್ನು ಆಕರ್ಷಿಸುವ ದೃಷ್ಟಿಯಿಂದ ಈ ಮಳಿಗೆಗಳಿಗೆ ಕನಿಷ್ಠ ಒಳಾಂಗಣ ಶೃಂಗಾರದ ಅವಶ್ಯಕತೆಯೂ ಸಹ ಇರುತ್ತದೆ. ಆದರೆ ಕುಶಲಕರ್ಮಿಗಳು ಆರ್ಥಿಕವಾಗಿ ದುರ್ಬಲರಾಗಿರುವುದರಿಂದ ಮಳಿಗೆಗಳನ್ನು ಪಡೆಯಲು ಮುಂಗಡ ಹಣ ಪಾವತಿ ಮತ್ತು ಒಳಾಂಗಣ ಶೃಂಗಾರದ ವೆಚ್ಚ ಭರಿಸಲು ಶಕ್ತರಾಗಿರುವುದಿಲ್ಲ. ಆದುದರಿಂದ ಅವರು ರಸ್ತೆಬದಿ ಕುಟೀರಗಳಲ್ಲಿ ಮಾರಾಟ ಮತ್ತು ದುರಸ್ತಿ ಕಾರ್ಯಗಳನ್ನು ಹಮ್ಮಿಕೊಳ್ಳುವ ಸಾಧ್ಯತೆಯೇ ಹೆಚ್ಚಿರುತ್ತದೆ. ಇವರುಗಳಿಗೆ ಸಮಾಜದಲ್ಲಿ ಗೌರವಯುತವಾದ ಸ್ಥಾನ ಕಲ್ಪಿಸಿಕೊಟ್ಟು ಮುಖ್ಯವಾಹಿನಿಗೆ ತರಬೇಕಾದ ಜವಾಬ್ದಾರಿ ನಿಗಮದ ಮೇಲಿರುತ್ತದೆ. ಈ ನಿಟ್ಟಿನಲ್ಲಿ ತರಬೇತಿ ಪಡೆದ ಕುಶಲಕರ್ಮಿಗಳು ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಮಹಾನಗರ ಪಾಲಿಕೆ ಪ್ರದೇಶಗಳಲ್ಲಿ ನೇರಮಾರಾಟ ಮಳಿಗೆಗಳನ್ನು ಸ್ಥಾಪಿಸಿಕೊಳ್ಳಲು ಅನುವಾಗುವಂತೆ ಬ್ಯಾಂಕ್ ಸಾಲ ಪಡೆದಲ್ಲಿ ಸಹಾಯಧನ ನೀಡಲಾಗುವುದು. ಸಹಾಯಧನವನ್ನು ನೇರವಾಗಿ ಬ್ಯಾಂಕ್ ಗಳಿಗೆ ಬಿಡುಗಡೆ ಮಾಡಲಾಗುವುದು. ಫಲಾನುಭವಿಗಳು ಕನಿಷ್ಟ ಪಕ್ಷ ಸಹಾಯಧನದಷ್ಟು ಅಥವಾ ಇನ್ನು ಹೆಚ್ಚು ಸಾಲವನ್ನು ಬ್ಯಾಂಕಿನಿಂದ ಪಡೆಯಬೇಕಾಗಿರುತ್ತದೆ.

**ಸಹಾಯಧನದ ವಿವರಗಳು ಕೆಳಕಂಡಂತಿವೆ:**

**ರೂ. ಗಳಲ್ಲಿ**

| ಮಳಿಗೆ ಸ್ಥಾಪಿಸುವ ಕೇಂದ್ರ | ಸಹಾಯ ಧನದಮೊತ್ತ |
|---|---|
| ತಾಲ್ಲೂಕು ಕೇಂದ್ರ ವ್ಯಾಪ್ತಿಗೆ ಒಳಪಡುವ ಪ್ರದೇಶಗಳು | 2,00,000/– |
| ಜಿಲ್ಲಾ ಕೇಂದ್ರ ವ್ಯಾಪ್ತಿಗೆ ಒಳಪಡುವ ಪ್ರದೇಶಗಳು | 3,00,000/– |
| ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ಪ್ರದೇಶಗಳು | 4,00,000/– |
| ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ಪ್ರದೇಶಗಳು | 5,00,000/– |

2017–18ನೇ ಸಾಲಿನಲ್ಲಿ 90 ಕುಶಲಕರ್ಮಿಗಳಿಗೆ ನೇರ ಮಾರಾಟ ಮಳಿಗೆಗಳನ್ನು ಪ್ರಾರಂಭಿಸಲು ಧನಸಹಾಯ ಒದಗಿಸುವ ಮೂಲಕ ಮಾರುಕಟ್ಟೆ ಬೆಂಬಲ ನೀಡಲು ಉದ್ದೇಶಿಸಲಾಗಿದ್ದು ಗುರಿ ವಿವರಗಳು ಕೆಳಕಂಡಂತಿವೆ.

| ಕೇಂದ್ರ | ಗುರಿ | ಧನಸಹಾಯ ರೂ. ಗಳಲ್ಲಿ | ಒಟ್ಟು ರೂ. ಗಳಲ್ಲಿ |
|---|---|---|---|
| ತಾಲ್ಲೂಕು ಕೇಂದ್ರ ವ್ಯಾಪ್ತಿಗೆ ಒಳಪಡುವ ಪ್ರದೇಶಗಳು | 30 | 2,00,000/– | 60,00,000/– |
| ಜಿಲ್ಲಾ ಕೇಂದ್ರ ವ್ಯಾಪ್ತಿಗೆ ಒಳಪಡುವ ಪ್ರದೇಶಗಳು | 30 | 3,00,000/– | 90,00,000/– |
| ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ಪ್ರದೇಶಗಳು | 20 | 4,00,000/– | 80,00,000/– |
| ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ಪ್ರದೇಶಗಳು | 10 | 5,00,000/– | 50,00,000/– |
| **ಒಟ್ಟು:** | **90** | | **2,80,00,000/–** |

* ಈ ಮೊತ್ತವನ್ನು 2016–17ನೇ ಸಾಲಿನ ಉಳಿಕೆ ಅನುದಾನದಲ್ಲಿ ಭರಿಸಲಾಗುವುದು.

**ಮೇಲ್ಕಂಡಂತೆ ಸಹಾಯಧನವನ್ನು ಪಡೆಯಲು ಉದ್ದೇಶಿತ ಫಲಾನುಭವಿಗಳು ಕೆಳಕಂಡ ಷರತ್ತು / ಕಾರ್ಯ ವಿಧಾನವನ್ನು ಪಾಲಿಸಬೇಕಾಗುತ್ತದೆ.**

1. ಉದ್ದೇಶಿತ ಫಲಾನುಭವಿಗಳು ಕೌಶಲ್ಯ ಅಭಿವೃದ್ಧಿ ಮತ್ತು ಆದಾಯ ಗಳಿಕೆಗಾಗಿ ತರಬೇತಿ ಶಿಬಿರ ಅಥವಾ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಕೌಶಲ್ಯ ವೃದ್ಧಿ ಯೋಜನೆ ಅಥವಾ ಮಹಿಳಾ ಕುಶಲಕರ್ಮಿಗಳಿಗೆ ಉದ್ಯಮ ಶೀಲತೆ ಮತ್ತು ಕೌಶಲ್ಯವೃದ್ಧಿ ಯೋಜನೆಗಳಡಿ ತರಬೇತಿ ಪಡೆದಿರಬೇಕು.
2. ಸ್ವ–ಸಹಾಯ ಸಂಘ ರಚಿಸಿಕೊಂಡ ಫಲಾಪೇಕ್ಷಿಗಳಿಗೆ ಆದ್ಯತೆ ನೀಡಲಾಗುವುದು.
3. ಉದ್ದೇಶಿತ ಫಲಾನುಭವಿಗಳು ಮಳಿಗೆಯ ಮುಂಗಡ, ಒಳಾಂಗಣ ಶೃಂಗಾರ ಮತ್ತು ದುಡಿಮೆ ಬಂಡವಾಳಕ್ಕಾಗಿ ಬೇಕಾಗಿರುವ ಒಟ್ಟು ವೆಚ್ಚದ ಅಂದಾಜು ಪಟ್ಟಿ ಸಿದ್ಧಪಡಿಸಿ ಇತರೆ ವಿವರಗಳೊಂದಿಗೆ ಸಂಬಂಧಪಟ್ಟ ಪ್ರದೇಶದಲ್ಲಿರುವ ಯಾವುದೇ ಬ್ಯಾಂಕ್‌ಗಳಲ್ಲಿ ಸಾಲ ಪಡೆಯಲು ಅರ್ಜಿ ಹಾಕಿಕೊಂಡಿರಬೇಕು.
4. ಬ್ಯಾಂಕ್ ಸಾಲ ಮಂಜೂರು ಮಾಡಿದ ನಂತರ ಮಂಜೂರಾತಿ ಆದೇಶದೊಂದಿಗೆ ಕ್ಲೈಮ್ ಫಾರಂನ್ನು ಸಲ್ಲಿಸಿದಲ್ಲಿ ನೇರವಾಗಿ ಬ್ಯಾಂಕ್ ಗೆ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು.
5. ಬ್ಯಾಂಕ್ ಸಾಲ ಕನಿಷ್ಟ ಪಕ್ಷ ಸಹಾಯಧನಕ್ಕೆ ಸಮನಾಗಿರಬೇಕು ಅಥವಾ ಹೆಚ್ಚಿರಬೇಕು.
6. ಮಳಿಗೆಯ ಬಾಡಿಗೆಯನ್ನು ಫಲಾನುಭವಿಗಳೆ ಭರಿಸತಕ್ಕದ್ದು.
7. ನಿಗಮವು ಸೂಚಿಸಿದ/ನಿಗದಿಪಡಿಸಿದ ನಾಮಫಲಕವನ್ನು ಮಾತ್ರ ಅಳವಡಿಸತಕ್ಕದ್ದು.
8. ಫಲಾನುಭವಿಗಳು ಮಳಿಗೆ ಮಾಲೀಕರೊಂದಿಗೆ ಮಾಡಿಕೊಂಡ ಬಾಡಿಗೆ ಕರಾರು ಪತ್ರದ ಪ್ರತಿ ಮತ್ತು ಮಳಿಗೆ ತೆರೆಯಲು ಅವಶ್ಯವಿರುವ ವೆಚ್ಚದ ಅಂದಾಜು ಪಟ್ಟಿ, ಬ್ಯಾಂಕ್ ನಿಂದ ಪಡೆದ ಸಾಲ ಮಂಜೂರಾತಿ ಆದೇಶ ಮುಂತಾದ ದಾಖಲೆಗಳನ್ನು ಸಹಾಯಧನ ಕ್ಲೈಮ್ ಮಾಡುವ ಸಂಧರ್ಭದಲ್ಲಿ ಸಲ್ಲಿಸಬೇಕು.
9. ಬ್ಯಾಂಕಿನಿಂದ ಪಡೆದ ಸಾಲದ ಕಂತುಗಳನ್ನು ಪಾವತಿಸಿ ಸಾಲ ಚುಕ್ತಾಗೊಳಿಸುವ ಜವಾಬ್ದಾರಿಯು ಫಲಾನುಭವಿಗಳದ್ದೇ ಆಗಿರುತ್ತದೆ.

## 3. ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಸಹಾಯ ಒದಗಿಸುವ ಯೋಜನೆ :

ರಾಜ್ಯದಲ್ಲಿರುವ ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳು ಕಡು ಬಡವರಾಗಿದ್ದು, ಅವರಲ್ಲಿರುವ ಅಲ್ಪ ಬಂಡವಾಳದಲ್ಲಿ ತಯಾರಿಸುವ ಉತ್ಪನ್ನಗಳನ್ನು ಖಾಸಗಿ ಡೀಲರ್‌ಗಳಿಗೆ ಮಾರಾಟ ಮಾಡುವುದರಿಂದ ಸರಿಯಾದ ಬೆಲೆ ಸಿಗದೆ ಶೋಷಣೆಗೆ ಒಳಗಾಗುತ್ತಿದ್ದಾರೆ.

ಈ ನಿಟ್ಟಿನಲ್ಲಿ ಲಿಡ್‌ಕರ್ ಸಂಸ್ಥೆಯು ಮದ್ಯ ಪ್ರವೇಶಿಸಿ ಚರ್ಮ ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳಿಗೆ ನ್ಯಾಯಯುತವಾತ ಬೆಲೆ ನಿಗದಿಪಡಿಸಿ ಸಂಗ್ರಹಣೆ ಮಾಡಿ ಮಾರುಕಟ್ಟೆ ಸಹಾಯ ಒದಗಿಸಿ ಅವರ ಜೀವನೋಪಾಯಕ್ಕೆ ದಾರಿ ಮಾಡಿ ಕೊಡುವ ಅಗತ್ಯವಿದೆ. ಇದರಿಂದ ಕುಶಲಕರ್ಮಿಗಳನ್ನು ಖಾಸಗಿ ಮದ್ಯವರ್ತಿಗಳ ಶೋಷಣೆಯಿಂದ ತಪ್ಪಿಸಿದಂತಾಗುವುದಲ್ಲದೆ ನಿರಂತರ ಉದ್ಯೋಗ ನೀಡಿದಂತಾಗುತ್ತದೆ.

ಕುಶಲಕರ್ಮಿಗಳು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಸಹಾಯ ಒದಗಿಸುವ ನಿಟ್ಟಿನಲ್ಲಿ ಉತ್ಪನ್ನಗಳನ್ನು ಅವರಿಂದ ಖರೀದಿಸಿ ಲಿಡ್‌ಕರ್ ಬ್ರಾಂಡ್‌ನಲ್ಲಿ ಮಾರಾಟ ಮಳಿಗೆಗಳ ಮೂಲಕ ಮತ್ತು ಸರ್ಕಾರಿ ಇಲಾಖೆಗಳಿಗೆ ನಿಗಮ ಮಂಡಳಿಗಳಿಗೆ ಮತ್ತು ಇತರೆ ಸಂಸ್ಥೆಗಳಿಗೆ ಮಾರಾಟ ಮಾಡಲಾಗುವುದು.

ಕುಶಲಕರ್ಮಿಗಳು ಕಚ್ಚಾಮಾಲು ಮತ್ತು ಲಾಸ್ಟ್‌ಗಳನ್ನು ಖರೀದಿಸುವ ಮೂಲಗಳ ಬಗ್ಗೆ ತಾಂತ್ರಿಕ ಮಾಹಿತಿ ನೀಡಿ ಮಾರುಕಟ್ಟೆಯಲ್ಲಿ ತ್ವರಿತವಾಗಿ ಮಾರಾಟವಾಗುವ ನವೀನ ಮಾದರಿಗಳನ್ನು ಒದಗಿಸಿ ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಸರಬರಾಜು ಮಾಡುವಂತೆ ಉತ್ತೇಜಿಸಲಾಗುವುದು. ಅವರಿಂದ ಸಿದ್ದಪಡಿದ ಚರ್ಮ ವಸ್ತುಗಳನ್ನು ಪಡೆದು ಅವರಿಗೆ ತಕ್ಷಣ ಪೂರ್ಣ ಹಣವನ್ನು ಪಾವತಿಸಲಾಗುವುದು.

ಈ ಯೋಜನೆಯಡಿ ತರಬೇತಿ ಪಡೆದ ನುರಿತ ಕುಶಲಕರ್ಮಿಗಳಿಂದ ಮತ್ತು ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುವ ಸ್ವಸಹಾಯ ಸಂಘಗಳಿಂದ ಬೇಡಿಕೆ ಆಧಾರದ ಮೇಲೆ ಉತ್ಪನ್ನಗಳನ್ನು ಸಂಗ್ರಹಿಸಿ ನಿರಂತರವಾಗಿ ಉದ್ಯೋಗ ಒದಗಿಸುವ ಸಲುವಾಗಿ ಕಳೆದ ಸಾಲಿನಲ್ಲಿ ಉಳಿದ ರೂ. 148.62 ಲಕ್ಷಗಳ ಅನುದಾನವನ್ನು ಉಪಯೋಗಿಸಲಾಗುವುದು.

ಕುಶಲಕರ್ಮಿಗಳಿಂದ ಖರೀದಿಸಿದ ಉತ್ಪನ್ನಗಳ ಮಾರಾಟದಿಂದ ಬಂದ ಲಾಭಾಂಶವನ್ನು ಮಳಿಗೆಗಳ ಬಾಡಿಗೆ, ಸಿಬ್ಬಂದಿ ವೆಚ್ಚ ಹಾಗೂ ಮಳಿಗೆಯ ನಿರ್ವಹಣಾ ವೆಚ್ಚಗಳಿಗೆ ಉಪಯೋಗಿಸಲಾಗುವುದು. 2017–18ನೇ ಸಾಲಿನಲ್ಲಿ ಕನಿಷ್ಠ ಪಕ್ಷ 148 ಚರ್ಮಕುಶಲಕರ್ಮಿಗಳ ಕುಟುಂಬಗಳನ್ನು ಅರ್ಹತೆಯ ಆಧಾರದ ಮೇಲೆ ಈ ಯೋಜನೆಯಡಿ ಅಳವಡಿಸಿ ನಿರಂತರ ಉದ್ಯೋಗ ಕಲ್ಪಿಸಲು ಉದ್ದೇಶಿಸಿದೆ.

## 4. ಸ್ವಯಂ ಉದ್ಯೋಗಕ್ಕೆ ದುಡಿಮೆ ಬಂಡವಾಳ ಸಾಲ ಯೋಜನೆ

ಚರ್ಮಕುಶಲಕರ್ಮಿಗಳು ಆರ್ಥಿಕವಾಗಿ ದುರ್ಬಲರಾಗಿರುವುದರಿಂದ ಸ್ವಾವಲಂಬಿಗಳಾಗಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಮತ್ತು ನಿಗಮದಿಂದ ಉತ್ಪನ್ನಗಳನ್ನು ಖರೀದಿಸಲು ಆದೇಶ ನೀಡಿದಾಗ ಕಚ್ಚಾಮಾಲು ಹೊಂದಿಸಲು ಬಂಡವಾಳಕ್ಕಾಗಿ ಹಾಗೂ ವ್ಯಾಪಾರ ಇತ್ಯಾದಿ ಚಟುವಟಿಕೆಗಳಿಗಾಗಿ ಕುಶಲಕರ್ಮಿಗಳು ಬ್ಯಾಂಕ್ ಮೂಲಕ ರೂ. 1.00 ಲಕ್ಷದವರೆಗೆ ದುಡಿಮೆ ಬಂಡವಾಳ ಸಾಲ ಪಡೆದಲ್ಲಿ ನಿಗಮದಿಂದ ಶೇ. 50 ರಷ್ಟು ಸಹಾಯಧನವನ್ನು ನಿಗಮದಿಂದ ನೀಡಲಾಗುವುದು. ಉಳಿದ ಮೊತ್ತ ಬ್ಯಾಂಕಿನ ಸಾಲವಾಗಿರುತ್ತದೆ. 2017–18ನೇ ಸಾಲಿನಲ್ಲಿ ರಾಜ್ಯಾದ್ಯಂತ 164 ಕುಶಲಕರ್ಮಿಗಳಿಗೆ ಸಾಲ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದ್ದು ಈ ಯೋಜನೆಗಾಗಿ ಕಳೆದ ಸಾಲಿನಲ್ಲಿ ಉಳಿದ ಅನುದಾನದ ರೂ. 82.30 ಲಕ್ಷಗಳನ್ನು ಉಪಯೋಗಿಸಲಾಗುವುದು. ಜಿಲ್ಲಾವಾರು ಗುರಿಯನ್ನು ಅನುಬಂಧ – 3 ರಲ್ಲಿ ತೋರಿಸಲಾಗಿದೆ.

## IV. ವಾಣಿಜ್ಯ ಉತ್ತೇಜನ ಕಾರ್ಯಕ್ರಮಗಳು :

### 1. ಲಿಡಕರ್ ಮಾರಾಟ ಮಳಿಗೆಗಳ ಉನ್ನತೀಕರಣ:

ಹಾಲಿ ಇರುವ ಲಿಡಕರ್ ಮಾರಾಟ ಮಳಿಗೆಗಳಲ್ಲಿ ಕೆಲವು ಮಾರಾಟ ಮಳಿಗೆಗಳ ಒಳಾಂಗಣ ಶೃಂಗಾರ ಆಕರ್ಷಣೆ ಕಳೆದುಕೊಂಡಿದ್ದು, ಹೆಚ್ಚು ಹೆಚ್ಚು ಗ್ರಾಹಕರನ್ನು ಆಕರ್ಷಿಸುವ ನಿಟ್ಟಿನಲ್ಲಿ ಒಳಾಂಗಣ ಶೃಂಗಾರದ ಉನ್ನತೀಕರಣ ಮಾಡುವ ಅವಶ್ಯಕತೆಯಿದ್ದು, ಆದ್ಯತೆಮೇರೆಗೆ ಮತ್ತು ಕಾಯ್ದಿರಿಸಿರುವ ಅನುದಾನಕ್ಕೆ ಅನುಗುಣವಾಗಿ ಬೆಂಗಳೂರಿನ ಜಯನಗರ, ಮೈಸೂರಿನ ಸಯ್ಯಾಜಿರಾವ್ ರಸ್ತೆ ಮತ್ತು ಕುವೆಂಪುನಗರ ಹಾಗೂ ಕಲಬುರಗಿ ನಗರದಲ್ಲಿರುವ ಮಾರಾಟ ಮಳಿಗೆಗಳ ಒಳಾಂಗಣ ಶೃಂಗಾರವನ್ನು ಉನ್ನತೀಕರಣಗೊಳಿಸಲಾಗುವುದು.

### 2. ರಾಜ್ಯ ಮಟ್ಟದ ಚರ್ಮಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ

ಎಲ್ಲಾ 30 ಜಿಲ್ಲೆಗಳಿಂದ ಕುಶಲಕರ್ಮಿಗಳನ್ನು ಆಹ್ವಾನಿಸಿ ಬೆಂಗಳೂರಿನ ಪ್ರಮುಖ ಸ್ಥಳದಲ್ಲಿ / ವಿಭಾಗೀಯ ಮಟ್ಟದಲ್ಲಿ ಅವರು ತಯಾರಿಸಿದ ಉತ್ಪನ್ನಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡಲು ವ್ಯವಸ್ಥೆ ಕಲ್ಪಿಸಲಾಗುವುದು. ಇದರಿಂದ ಕುಶಲಕರ್ಮಿಗಳು ವಿವಿಧ ಪ್ರದೇಶಗಳಲ್ಲಿ ತಯಾರಿಸಲ್ಪಡುವ ಮಾದರಿಗಳನ್ನು ವೀಕ್ಷಿಸಿ ಕೌಶಲ್ಯವನ್ನು ಪರಸ್ಪರ ಅರಿತುಕೊಳ್ಳಲು ಅವಕಾಶ ಕಲ್ಪಿಸಿದಂತಾಗುವುದು. ಹಾಗೂ ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳ ಮಾದರಿ ಮತ್ತು ಗುಣಮಟ್ಟ ಆಧರಿಸಿ ಜಿಲ್ಲಾ ಮಟ್ಟ ಮತ್ತು ರಾಜ್ಯಮಟ್ಟದ ಪ್ರಶಸ್ತಿಗಳನ್ನು ವಿತರಿಸಲಾಗುವುದು.

ಇದಲ್ಲದೆ ಸೆಪ್ಟೆಂಬರ್ 2017 ರಿಂದ ಡಿಸೆಂಬರ್ 2017 ರವರೆಗೆ ನಡೆಯುವ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಸಹ ಭಾಗವಹಿಸಿ ಹೆಚ್ಚು ಹೆಚ್ಚು ಕುಶಲಕರ್ಮಿಗಳ ಉತ್ಪನ್ನಗಳನ್ನು ಮಾರಾಟ ಮಾಡಲಾಗುವುದು.

ಈ ಯೋಜನೆ ಜಾರಿಗೊಳಿಸಲು 2017-18ನೇ ಸಾಲಿನಲ್ಲಿ ರೂ. 20.00 ಲಕ್ಷಗಳ ಅನುದಾನವನ್ನು ಕಾಯ್ದಿರಿಸಲಾಗಿದೆ.

### 3. ಪ್ರಚಾರ ಮತ್ತು ಜಾಹಿರಾತು

ಪ್ರಮುಖ ಹಬ್ಬಗಳ ಸಂಧರ್ಭದಲ್ಲಿ ಕುಶಲಕರ್ಮಿಗಳು ಹಾಗೂ ಸಣ್ಣ ಪ್ರಮಾಣದ ಘಟಕಗಳು ತಯಾರಿಸುವ ಚರ್ಮೋತ್ಪನ್ನಗಳ ಮಾರಾಟದ ಮೇಲೆ ರಿಯಾಯಿತಿ ಘೋಷಣೆ ಮಾಡಿದಾಗ ವ್ಯಾಪಕ ಪ್ರಚಾರ ಒದಗಿಸಲಾಗುವುದು. ಅಲ್ಲದೆ ನಿಗಮವು ಚರ್ಮೋದ್ಯಮದ ಬೆಳವಣಿಗೆಗಾಗಿ ಮತ್ತು ಕುಶಲಕರ್ಮಿಗಳ ಶ್ರೇಯೋಭಿವೃದ್ದಿಗಾಗಿ ಹಮ್ಮಿಕೊಳ್ಳುತ್ತಿರುವ ಯೋಜನೆಗಳ ಬಗ್ಗೆ ಪ್ರಚಾರ ಒದಗಿಸಿ ರಾಜ್ಯಾದ್ಯಂತ ಇರುವ ಚರ್ಮ ಕುಶಲಕರ್ಮಿಗಳಿಗೆ ನಿಗಮದ ಯೋಜನೆಗಳ ಬಗ್ಗೆ ಅರಿವು ಮೂಡಿಸಲಾಗುವುದು. ಹಾಗೂ ಅರ್ಜಿಗಳನ್ನು ಆಹ್ವಾನಿಸುವಾಗ ಎಲ್ಲಾ ದಿನಪತ್ರಿಕೆಗಳಲ್ಲಿ ಮತ್ತು ಪೋಸ್ಟರ್, ಬ್ರೋಚರ್, ಕರಪತ್ರಗಳನ್ನು ವಿತರಿಸುವ ಮೂಲಕ ಹಾಗೂ ಇತರೆ ಮಾದ್ಯಮಗಳ ಮೂಲಕ ವ್ಯಾಪಕ ಪ್ರಚಾರ ಒದಗಿಸಲಾಗುವುದು.

ಈ ಯೋಜನೆಗಾಗಿ 2017-18ನೇ ಸಾಲಿನಲ್ಲಿ ರೂ. 50.00 ಲಕ್ಷಗಳ ಅನುದಾನವನ್ನು ಕಾಯ್ದಿರಿಸಲಾಗಿದೆ.

## 4. ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳ ಮಾರಾಟದ ಮೇಲೆ ರಿಯಾಯಿತಿ ನೀಡುವುದು.

ಪ್ರಮುಖ ಹಬ್ಬಗಳಾದ ಗೌರಿ ಗಣೇಶ, ದಸರಾ, ದೀಪಾವಳಿ, ಯುಗಾದಿ ಹಾಗೂ ತೀರುವಳಿ ಮಾರಾಟದ ಸಂಧರ್ಭದಲ್ಲಿ ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳ ಮೇಲೆ ದಾಸ್ತಾನಿನ ಅವಧಿ ಪರಿಗಣಿಸಿ ಶೇ. 20 ರಿಂದ 40 ರಷ್ಟು ರಿಯಾಯಿತಿ ಘೋಷಿಸಲಾಗುವುದು. ಇದರಿಂದ ಹೆಚ್ಚು ಕುಶಲಕರ್ಮಿಗಳ ಉತ್ಪನ್ನಗಳನ್ನು ಮಾರಾಟ ಮಾಡಲು ಅನುಕೂಲವಾಗುವುದಲ್ಲದೆ ನಿರಂತರ ಉದ್ಯೋಗ ನೀಡಲು ಸಹ ಅನುಕೂಲವಾಗುತ್ತದೆ. ಅಲ್ಲದೆ ನಿಗಮದ ಮಾರಾಟ ಮಳಿಗೆಗಳ ವಹಿವಾಟನ್ನು ಹೆಚ್ಚಿಸಿದಂತಾಗುತ್ತದೆ.

ಈ ಯೋಜನೆಯಡಿ 2017–18ನೇ ಸಾಲಿನಲ್ಲಿ ರೂ. 25.00 ಲಕ್ಷಗಳ ಅನುದಾನವನ್ನು ಕಾಯ್ದಿರಿಸಲಾಗಿದೆ.

## V. ಮೂಲಭೂತ ಸೌಕರ್ಯಗಳ ಅಭಿವೃದ್ಧಿ :

**1. ಚರ್ಮ ಕುಶಲಕರ್ಮಿಗಳಿಗೆ "ಡಾ: ಬಾಬು ಜಗಜೀವನ ರಾಂ ವಸತಿ ಕಾರ್ಯಾಗಾರ ನಿರ್ಮಾಣ ಯೋಜನೆ"**

ಚರ್ಮೋದ್ಯಮದಲ್ಲಿ ತೊಡಗಿರುವ ಕುಶಲಕರ್ಮಿಗಳು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ವಾಸಿಸಲು ಯೋಗ್ಯವುಳ್ಳ ಮನೆಗಳು ಇರುವುದಿಲ್ಲ. ಮನೆಗಳು ಇದ್ದರೂ ಸಹ ಸ್ಥಳಾವಕಾಶ ಕಡಿಮೆ ಇರುವುದರಿಂದ ಅವರು ಉದ್ಯೋಗದಲ್ಲಿ ತೊಡಗಲು ಮತ್ತು ಉದ್ಯೋಗಕ್ಕೆ ಬೇಕಾದ ಯಂತ್ರೋಪಕರಣಗಳನ್ನು ಇಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ಆದುದರಿಂದ ರಸ್ತೆಬದಿ ಕುಳಿತು ಕೆಲಸ ಮಾಡುವುದು ಅಥವಾ ಮನೆಯಂಗಳದಲ್ಲಿ ಕೆಲಸ ಮಾಡುವುದು ಅನಿವಾರ್ಯವಾಗಿರುತ್ತದೆ. ಅವರ ದುಡಿಮೆಯಲ್ಲಿ ಜೀವನ ಸಾಗಿಸುವುದು ಕಷ್ಟ ಸಾದ್ಯವಾಗಿರುವುದರಿಂದ ಬಹುತೇಕ ಕುಶಲಕರ್ಮಿಗಳಿಗೆ ಕಾರ್ಯಾಗಾರಗಳನ್ನು ಹೊಂದಲು ಸಾಧ್ಯವಾಗುವುದಿಲ್ಲ. ಆದುದರಿಂದ ನಿವೇಶನ ಹೊಂದಿರುವ ಕುಶಲಕರ್ಮಿಗಳಿಗೆ ರೂ. 2.50 ಲಕ್ಷಗಳ ಘಟಕ ವೆಚ್ಚದಲ್ಲಿ ವಸತಿ ಸಹಿತ ಕಾರ್ಯಾಗಾರ ನಿರ್ಮಿಸಿಕೊಡಲು ಯೋಜನೆ ರೂಪಿಸಲಾಗಿದೆ. ಗುಡಿಸಲು ಅಥವಾ ಶಿಥಿಲಗೊಂಡ ಮನೆ ಇದ್ದರೂ ಸಹ ಈ ಯೋಜನೆಯಡಿ ಸೌಲಭ್ಯವನ್ನು ಪಡೆಯಬಹುದಾಗಿದೆ.

ಬೀದಿಯಲ್ಲಿ ಕುಳಿತು ಕೆಲಸ ನಿರ್ವಹಿಸುವ ನಿರ್ಗತಿಕ / ವಸತಿ ರಹಿತ ಕುಶಲಕರ್ಮಿಗಳಿಗೆ, ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಈ ಯೋಜನೆ ಅಡಿ ಮೊದಲ ಆದ್ಯತೆ ನೀಡಲಾಗುವುದು.

2017-18 ನೇ ಸಾಲಿನಲ್ಲಿ ಈ ಯೋಜನೆಗೆ ರೂ. 2200.00 ಲಕ್ಷಗಳ ಅನುದಾನವನ್ನು ಬಳಸಿಕೊಂಡು ರಾಜ್ಯಾದ್ಯಂತ 1000 ಕುಶಲಕರ್ಮಿಗಳಿಗೆ ವಸತಿ ಸಹಿತ ಕಾರ್ಯಾಗಾರಗಳನ್ನು ನಿರ್ಮಿಸಿ ಕೊಡಲು ಉದ್ದೇಶಿಸಲಾಗಿದೆ.

ಇದುವರೆವಿಗೂ ಹೆಚ್ಚಿನ ಸೌಲಭ್ಯಗಳು ದೊರೆಯದ ಮತ್ತು ಕುಶಲಕರ್ಮಿಗಳ ಸಾಂದ್ರತೆ ಹೆಚ್ಚಾಗಿರುವ ಜಿಲ್ಲೆಗಳಿಗೆ / ತಾಲ್ಲೂಕುಗಳಿಗೆ ಹೆಚ್ಚುವರಿ ಗುರಿ ನಿಗಧಿಪಡಿಸಲಾಗುವುದು.

ಈ ಯೋಜನೆಯನ್ನು ರಾಜೀವ್ ಗಾಂಧಿ ಗ್ರಾಮೀಣಾ ವಸತಿ ನಿಗಮದ ಮೂಲಕ ಅನುಷ್ಠಾನಗೊಳಿಸಲಾಗುವುದು.

### ಯೋಜನಾ ವೆಚ್ಚ

ಅ) ಒಂದು ಘಟಕದ ವೆಚ್ಚ – ರೂ. 2.50 ಲಕ್ಷಗಳು

| **ಘಟಕದ ವೆಚ್ಚ ರೂ. 2.50 ಲಕ್ಷಗಳಲ್ಲಿ** | |
|---|---|
| ಅ. ಸಹಾಯ ಧನ | ರೂ. 2,20,000=00 |
| ಆ. ಕುಶಲಕರ್ಮಿಯು ಭರಿಸಬೇಕಾದ ವಂತಿಗೆ ಹಣ | ರೂ. 30,000=00 |
| | **ಒಟ್ಟು ರೂ 2,50,000=00** |

**2017-18ನೇ ಸಾಲಿಗೆ ನಿಗಧಿಪಡಿಸಿದ ಅನುದಾನ**

**ರೂ. 2,20,000/- ಸಹಾಯಧನ x 1000 = ರೂ. 2200.00 ಲಕ್ಷಗಳು**

**2. ವಸತಿ ಕಾರ್ಯಾಗಾರ ನಿರ್ಮಿಸಲು ಜಮೀನು ಖರೀದಿಸುವುದು ಮತ್ತು ಜಿ + 2 / ವೈಯಕ್ತಿಕ ಮಾದರಿಯ ವಸತಿ ಸಹಿತ ಕಾರ್ಯಾಗಾರವನ್ನು ನಿರ್ಮಿಸುವುದು.**

ಸರ್ಕಾರದಿಂದ ಮಂಜೂರಾದ ಜಮೀನು ಅಥವಾ ಕುಶಲಕರ್ಮಿಗಳ ಸಂಘ ಸಂಸ್ಥೆಗಳೆ ಖರೀದಿಸಿರುವ ಜಮೀನು ಅಥವಾ ದಾನಿಗಳು ಕುಶಲಕರ್ಮಿಗಳಿಗೆ/ ಸಂಘ ಸಂಸ್ಥೆಗಳಿಗೆ/ ಲಿಡಕರ್ ಸಂಸ್ಥೆಗೆ ಜಮೀನು ಡೊನೇಟ್ ಮಾಡಿದಲ್ಲಿ ಇಂತಹ ಸ್ಥಳಗಳಲ್ಲಿ ಡಾ: ಬಾಬು ಜಗಜೀವನ ರಾಂ ವಸತಿ ಸಹಿತ ಕಾರ್ಯಾಗಾರಗಳನ್ನು ನಿರ್ಮಿಸಿ

ಕೊಡಲಾಗುವುದು. ಸರ್ಕಾರವು ಜಮೀನಿಗೆ ನಿಗದಿಪಡಿಸುವ ಮೊತ್ತವನ್ನು ನಿಗಮದಿಂದ ಭರಿಸಲಾಗುವುದು. ಹಾಗೂ ರೂ. 3.36 ಲಕ್ಷಗಳ ಘಟಕ ವೆಚ್ಚದಲ್ಲಿ ಜಿ + 2 /ವೈಯಕ್ತಿಕ ಮಾದರಿಯ ವಸತಿ ಸಹಿತ ಕಾರ್ಯಾಗಾರಗಳನ್ನು ನಿಗಮದಿಂದಲೆ ನಿರ್ಮಿಸಿಕೊಡಲಾಗುವುದು.

ಬೀದಿ ಬದಿ ಕುಳಿತು ಕೆಲಸ ನಿರ್ವಹಿಸುವ ನಿರ್ಗತಿಕರಾದ ನಿವೇಶನ / ವಸತಿ ರಹಿತ ಕುಶಲಕರ್ಮಿಗಳಿಗೆ ಅದರಲ್ಲೂ ಅಂಗವಿಕಲರಿಗೆ ಮತ್ತು ವಿಧವೆಯರಿಗೆ ಈ ಯೋಜನೆಯಡಿ ಆದ್ಯತೆ ನೀಡಲಾಗುವುದು.

2017–18ನೇ ಸಾಲಿನಲ್ಲಿ ರೂ. 672.00 ಲಕ್ಷಗಳ ವೆಚ್ಚದಲ್ಲಿ 200 ವಸತಿ ಸಹಿತ ಕಾರ್ಯಾಗಾರಗಳನ್ನು ನಿರ್ಮಿಸಿಕೊಡುವ ಗುರಿಹೊಂದಲಾಗಿದೆ.

**3. ಬೆಂಗಳೂರಿನ ವಸಂತನಗರದಲ್ಲಿ ಡಾ: ಬಾಬು ಜಗಜೀವನ ರಾಂ ಲಿಡ್‌ಕರ್ ಭವನ ನಿರ್ಮಾಣ.**

ಬೆಂಗಳೂರಿನ ವಸಂತನಗರದಲ್ಲಿ ಬಿಬಿಎಂಪಿ ವತಿಯಿಂದ 100' x 50' ವಿಸ್ತೀರ್ಣವುಳ್ಳ ಜಾಗವನ್ನು ಶಿಥಿಲಗೊಂಡ ಶೆಡ್ ಸಮೇತ ನಿಗಮಕ್ಕೆ ಹಂಚಿಕೆ ಮಾಡಲಾಗಿದ್ದು, ನಿಗಮದ ಹೆಸರಿಗೆ ಕ್ರಯ ಮಾಡಿಸಿಕೊಳ್ಳಲಾಗಿದೆ. ಈಗ ಶೆಡ್ ಶಿಥಿಲಾವಸ್ಥೆಗೆ ಬಂದಿರುವುದರಿಂದ ಅದನ್ನು ನೆಲಸಮ ಮಾಡಿ ಆ ಜಾಗದಲ್ಲಿ ನಿಗಮದ ಪ್ರಧಾನ ಕಛೇರಿ, ಕುಶಲಕರ್ಮಿಗಳ ಉತ್ಪನ್ನಗಳ ಮಾರಾಟ ಮಳಿಗೆ, ಮತ್ತು ಮಿನಿ ಆಡಿಟೋರಿಯಂ ಒಳಗೊಂಡ ಐದು ಮಹಡಿಯ "ಡಾ: ಬಾಬು ಜಗಜೀವನ ರಾಂ ಲಿಡ್‌ಕರ್ ಭವನ" ನಿರ್ಮಾಣ ಮಾಡಲಾಗುವುದು. ಸದರಿ ಭವನದ ಕಾಮಗಾರಿಯನ್ನು ಕರ್ನಾಟಕ ಗೃಹ ಮಂಡಳಿಗೆ ವಹಿಸಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ

2017–18ನೇ ಸಾಲಿನಲ್ಲಿ ಅವಶ್ಯವಿರುವ ರೂ. 40.00 ಲಕ್ಷಗಳ ಅನುದಾನವನ್ನು ಕಾಯ್ದಿರಿಸಿದೆ.

**4. ಮೈಸೂರಿನ ಸಾತಗಳ್ಳಿಯಲ್ಲಿರುವ ನಿಗಮದ ಜಮೀನಿನಲ್ಲಿ ಡಾ: ಬಾಬು ಜಗಜೀವನ ರಾಂ ಲೆದರ್ ಕಾಂಪ್ಲೆಕ್ಸ್ ಮತ್ತು ಕೌಶಲ್ಯ ಅಭಿವೃದ್ಧಿ ಕೇಂದ್ರ ನಿರ್ಮಾಣ ಯೋಜನೆ**

ಮೈಸೂರಿನ ಸಾತಗಳ್ಳಿಯಲ್ಲಿ ನಿಗಮವು ಸುಮಾರು 15 ಎಕರೆ ಜಮೀನು ಹೊಂದಿದ್ದು, ಅದರಲ್ಲಿ ಈಗಾಗಲೆ 140 ವಸತಿ ಕಾರ್ಯಾಗಾರಗಳನ್ನು ನಿರ್ಮಿಸಿ ಚರ್ಮಕುಶಲಕರ್ಮಿಗಳಿಗೆ ಹಂಚಿಕೆ ಮಾಡಲಾಗಿದೆ. ಮೈಸೂರಿನ ಗಾಂಧೀನಗರ, ಈರನಗೆರೆ ಮತ್ತು ಸಾತಗಳ್ಳಿ ಪ್ರದೇಶಗಳಲ್ಲಿ ಚರ್ಮ ಕುಶಲಕರ್ಮಿಗಳ ಸಾಂದ್ರತೆ ಹೆಚ್ಚಾಗಿದ್ದು, ಪರಿಶಿಷ್ಟ ಜಾತಿಗೆ ಸೇರಿದ ಸಾವಿರಾರು ಕುಶಲಕರ್ಮಿಗಳು ವಾಸಿಸುತ್ತಿದ್ದಾರೆ. ಮೈಸೂರಿನಲ್ಲಿ ಚರ್ಮೋದ್ಯಮಕ್ಕೆ ಸಂಬಂಧಪಟ್ಟಂತೆ ಅಪಾರವಾದ ಮಾನವ ಸಂಪನ್ಮೂಲ ಲಭ್ಯವಿದ್ದು, ಇವರುಗಳೂ ಪಾರಂಪರಿಕವಾಗಿ ಚರ್ಮೋದ್ಯಮದಲ್ಲಿ ತೊಡಗಿರುತ್ತಾರೆ. ಇವರುಗಳಿಗೆ ಹೆಚ್ಚಿನ ಉತ್ತೇಜನ ನೀಡಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಸ್ವಾವಲಂಭಿಗಳನ್ನಾಗಿ ಮಾಡುವ ನಿಟ್ಟಿನಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಿಗಮವು ಮೈಸೂರಿನ ಸಾತಗಳ್ಳಿಯಲ್ಲಿ ಹೊಂದಿರುವ ಸುಮಾರು 10 ಎಕರೆ ಖಾಲಿ ಜಮೀನಿನಲ್ಲಿ ಡಾ: ಬಾಬು ಜಗಜೀವನ ರಾಂ ಲೆದರ್ ಕಾಂಪ್ಲೆಕ್ಸ್ ಮತ್ತು ಕೌಶಲ್ಯ ಅಭಿವೃದ್ಧಿ ಕೇಂದ್ರವನ್ನು ನಿರ್ಮಾಣ ಮಾಡಲು ಉದ್ದೇಶಿಸಿದೆ.

ಈ ಸಂಕೀರ್ಣಗಳಲ್ಲಿ ವಾಸಿಸುತ್ತಿರುವ ಚರ್ಮ ಕುಶಲಕರ್ಮಿಗಳಿಗೆ ಸ್ವಯಂ ಉದ್ಯೋಗ ಮತ್ತು ಕೇಂದ್ರೀಕೃತ ಮಾರುಕಟ್ಟೆ ವ್ಯವಸ್ಥೆಗಾಗಿ (ಹೋಲ್ ಸೇಲ್ ಮತ್ತು ರೀಟೆಲ್ ಮಾರಾಟಮಿನಿ ವರ್ಕ್ ಷೆಡ್ ಮತ್ತು ಮಾರಾಟ ಮಳಿಗೆಗಳನ್ನು ನಿರ್ಮಿಸಿಕೊಡಲು ಉದ್ದೇಶಿಸಲಾಗಿದೆ. ಮುಂದುವರೆದು ಕುಶಲಕರ್ಮಿಗಳ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಡಾ: ಬಾಬು ಜಗಜೀವನ ರಾಂ ಸಮುದಾಯ ಭವನ ಅಥವಾ ವಸತಿರಹಿತ ಚರ್ಮಕುಶಲಕರ್ಮಿಗಳಿಗೆ ವಸತಿಗಳನ್ನು ಮತ್ತು ಸುಸಜ್ಜಿತ ತರಬೇತಿ ಕೇಂದ್ರವನ್ನು ನಿರ್ಮಿಸಿಕೊಡಲು ಉದ್ದೇಶಿಸಿರುವುದರಿಂದ ಈ ಯೋಜನೆಗೆ 2017–18ನೇ ಸಾಲಿನಲ್ಲಿ ರೂ. 375.00 ಲಕ್ಷಗಳ ಅನುದಾನವನ್ನು ಕಾಯ್ದಿರಿಸಲಾಗಿದೆ.

**ಮುಂಬರುವ ದಿನಗಳಲ್ಲಿ ಸದರಿ ಕಾಂಪ್ಲೆಕ್ಸ್‌ನಲ್ಲಿ ಕೆಳಕಂಡ ಸೌಲಭ್ಯಗಳನ್ನು ಸೃಷ್ಟಿಸಲು ಉದ್ದೇಶಿಸಿದೆ.**

ಅ. ಆಧುನಿಕ ತಾಂತ್ರಿಕ ತರಬೇತಿ ಕೇಂದ್ರ

ಆ. ಚರ್ಮ ಕುಶಲಕರ್ಮಿ ಆಧಾರಿತ ಉದ್ಯಮಗಳ ಜಂಟಿ ಸಹಬಾಗಿತ್ವದಲ್ಲಿ ಬೃಹತ್ ಕೈಗಾರಿಕೆಗಳು ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಲು ಕೈಗಾರಿಕಾ ಷೆಡ್‌ಗಳು

ಇ. ಡಾ: ಬಾಬು ಜಗಜೀವನ ರಾಂ ಕೌಶಲ್ಯ ಅಭಿವೃದ್ಧಿ ಕೇಂದ್ರ.

ಆ. ಚರ್ಮ ಕುಶಲಕರ್ಮಿಗಳ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಸಮುದಾಯ ಭವನ.

ಇ. ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಕುಶಲಕರ್ಮಿಗಳ ಮಕ್ಕಳಿಗೆ ಶಾಲೆ.

ಈ. ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಆಸ್ಪತ್ರೆ.

ಉ. ಮೈಸೂರು ಮಹಾನಗರ ಪಾಲಿಕೆ ಸಹಯೋಗದೊಂದಿಗೆ ಉದ್ಯಾನ ವನ.

ಊ. ಧಾರ್ಮಿಕ ಚಟುವಟಿಕೆಗಳಿಗಾಗಿ ಪೂಜಾ ಸ್ಥಳ.

ಮೇಲ್ಕಂಡ ಸೌಲಭ್ಯಗಳನ್ನು ಒಳಗೊಂಡ ಲೆದರ್ ಕಾಂಪ್ಲೆಕ್ಸ್ ಮತ್ತು ಕೌಶಲ್ಯ ಅಭಿವೃದ್ಧಿ ಕೇಂದ್ರ ನಿರ್ಮಾಣ ಮಾಡಿ ಚರ್ಮೋದ್ಯಮದ ಬೆಳವಣಿಗೆಗೆ ಮತ್ತು ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಸಹಕಾರಿಯಾಗಲು ಉದ್ದೇಶಿಸಲಾಗಿದೆ.

**5. ನಿಗಮವು ಹೊಂದಿರುವ ಜಮೀನುಗಳಿಗೆ ಭದ್ರತೆ ದೃಷ್ಟಿಯಿಂದ ಆವರಣಗೋಡೆ ನಿರ್ಮಾಣ ಮಾಡುವುದು:**

ಸರ್ಕಾರದಿಂದ ನಿಗಮಕ್ಕೆ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಜಮೀನು ಹಂಚಿಕೆಯಾಗಿರುವುದರಿಂದ/ ಆಗಲಿರುವುದರಿಂದ ಭದ್ರತೆಯ ದೃಷ್ಟಿಯಿಂದ ಆವರಣಗೋಡೆ ನಿರ್ಮಿಸಲು ಉದ್ದೇಶಿಸಲಾಗಿದ್ದು, 2017–18ನೇ ಸಾಲಿನಲ್ಲಿ ಸದರಿ ಕಾಮಗಾರಿಗಾಗಿ ರೂ. 100.00 ಲಕ್ಷಗಳ ಅನುದಾನವನ್ನು ಕಾಯ್ದಿರಿಸಲಾಗಿದೆ.

**6. ಲಿಡ್‌ಕರ್ ಸಂಕೀರ್ಣಗಳಲ್ಲಿ ಚರ್ಮ ಕುಶಲಕರ್ಮಿಗಳಿಗೆ ಸಾಂಸ್ಕೃತಿಕ ಸಮುದಾಯ ಭವನ ನಿರ್ಮಾಣ ಮಾಡುವುದು.**

2017–18 ನೇ ಸಾಲಿನಲ್ಲಿ ನಿಗಮವು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮತ್ತು ಚಿತ್ರದುರ್ಗ ತಾಲ್ಲೂಕು ಕೇಂದ್ರಗಳಲ್ಲಿ ಲಿಡಕರ್ ಸಂಕೀರ್ಣಗಳನ್ನು ನಿರ್ಮಿಸಲು ಉದ್ಧೇಶಿಸಿರುವುದರಿಂದ ಈ ಸಂಕೀರ್ಣಗಳಲ್ಲಿ ಕುಶಲಕರ್ಮಿಗಳ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಸಮುದಾಯ ಭವನಗಳನ್ನು ಅಥವಾ ಉದ್ಯೋಗ/ ತರಬೇತಿ ನಡೆಸಲು ಸಾಮಾನ್ಯ ಸೌಲಭ್ಯ ಕೇಂದ್ರಗಳನ್ನು ನಿರ್ಮಿಸಲು ಉದ್ಧೇಶಿಸಲಾಗಿದೆ.

ಸದರಿ ಕಾಮಗಾರಿಗಳಿಗೆ 2017–18ನೇ ಸಾಲಿನಲ್ಲಿ ರೂ. 100.00 ಲಕ್ಷಗಳ ಅನುದಾನವನ್ನು ಕಾಯ್ದಿರಿಸಲಾಗಿದೆ.

**7. ಬೆಂಗಳೂರಿನ, ವಾಜರಹಳ್ಳಿ. ಕೆ.ಜಿ.ಹಳ್ಳಿಯಲ್ಲಿ ಕಟ್ಟಡಗಳ ದುರಸ್ತಿ ಮತ್ತು ಚಿಕ್ಕಬಳ್ಳಾಪುರ / ಚಿತ್ರದುರ್ಗ ನಗರದಲ್ಲಿ ನಿಗಮವು ಹೊಂದಿರುವ ಜಾಗಗಳಲ್ಲಿ ಕುಶಲಕರ್ಮಿಗಳ ಮಳಿಗೆಗಳು ಮತ್ತು ಸಂಕೀರ್ಣ ನಿರ್ಮಾಣ ಮಾಡುವುದು.**

ಬೆಂಗಳೂರಿನ ವಾಜರಹಳ್ಳಿ, ಕೆ.ಜಿ.ಹಳ್ಳಿ ಮತ್ತು ಇತರೆ ಸ್ಥಳಗಳಲ್ಲಿ ನಿಗಮವು ಸಾಮಾನ್ಯ ಸೌಲಭ್ಯ ಕೇಂದ್ರಗಳ ಶೆಡ್ಡುಗಳನ್ನು ಹೊಂದಿದ್ದು, ಇವುಗಳ ನಿರ್ವಹಣೆ ದೃಷ್ಟಿಯಿಂದ ದುರಸ್ತಿ ಕಾಮಗಾರಿ ಕೈಗೊಳ್ಳುವ ಅವಶ್ಯಕತೆ ಇರುತ್ತದೆ. ಹಾಗೂ ಚಿಕ್ಕಬಳ್ಳಾಪುರ / ಚಿತ್ರದುರ್ಗ ನಗರಗಳಲ್ಲಿ ನಿಗಮವು ಹೊಂದಿರುವ ಜಾಗಗಳಲ್ಲಿ ಕುಶಲಕರ್ಮಿಗಳ ಮಳಿಗೆಗಳು ಮತ್ತು ಸಂಕೀರ್ಣ / ಆಡಿಟೋರಿಯಂ ನಿರ್ಮಾಣ ಮಾಡುವ ಉದ್ಧೇಶವನ್ನು ಹೊಂದಲಾಗಿದೆ.

2017–18ನೇ ಸಾಲಿನಲ್ಲಿ ಈ ಕಾಮಗಾರಿಗಳಿಗಾಗಿ ರೂ. 300.00 ಲಕ್ಷಗಳ ಅನುದಾನವನ್ನು ಕಾಯ್ದಿರಿಸಲಾಗಿದೆ.

## VI. ಕಲ್ಯಾಣ ಯೋಜನೆಗಳು :

### 1. ಚರ್ಮ ಕುಶಲಕರ್ಮಿಗಳಿಗೆ ವಿಮಾ ಸೌಲಭ್ಯ ಒದಗಿಸುವ ಯೋಜನೆ

ನಿಗಮದ ವಿವಿಧ ಯೋಜನೆಗಳಡಿ ಪ್ರಯೋಜನ ಪಡೆದ ಕುಶಲಕರ್ಮಿಗಳನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ ಮತ್ತು ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ ಅಡಿ ಅಳವಡಿಸಿ ವಿಮಾ ಸೌಲಭ್ಯ ಕಲ್ಪಿಸುವ ಉದ್ದೇಶ ಹೊಂದಲಾಗಿದ್ದು, ಪ್ರತಿ ವರ್ಷ ಪ್ರತಿ ಕುಶಲಕರ್ಮಿ ಬ್ಯಾಂಕ್ ಖಾತೆಗೆ ಕ್ರಮವಾಗಿ ರೂ. 330/- ಹಾಗೂ ರೂ. 12/- + ಸೇವಾ ತೆರಿಗೆ ವಿಮಾ ಕಂತನ್ನು ಜಮಾ ಮಾಡಲಾಗುವುದು. ಈ ಯೋಜನೆಗಳಡಿ ಕುಶಲಕರ್ಮಿಗಳು ಸ್ವಾಭಾವಿಕವಾಗಿ ಅಥವಾ ಅಪಘಾತದಿಂದ ಮರಣ ಹೊಂದಿದಲ್ಲಿ ರೂ. 2.00 ಲಕ್ಷದವರೆಗೆ ಅವರ ವಾರಸುದಾರರು (ನಾಮಿನಿ) ವಿಮೆ ಸೌಲಭ್ಯ ಪಡೆಯಲಿದ್ದಾರೆ.

ಈ ಯೋಜನೆಗಾಗಿ 2016-17ನೇ ಸಾಲಿನಲ್ಲಿ ಉಳಿದಿರುವ ರೂ. 12.50 ಲಕ್ಷಗಳ ಅನುದಾನವನ್ನು ಈ ಸಾಲಿನಲ್ಲಿ ಬಳಸಿಕೊಳ್ಳಲಾಗುವುದು.

### 2. ಚರ್ಮ ಕುಶಲಕರ್ಮಿಗಳು ಮರಣ ಹೊಂದಿದಾಗ ಅಂತ್ಯ ಸಂಸ್ಕಾರದ ವೆಚ್ಚಕ್ಕಾಗಿ ಧನ ಸಹಾಯ ಒದಗಿಸುವುದು.

ಚರ್ಮಕುಶಲಕರ್ಮಿಗಳು ಬಡ ಕುಟುಂಬಗಳಿಗೆ ಸೇರಿದವರಾಗಿದ್ದು ಜೀವನ ನಿರ್ವಹಣೆ ಕಷ್ಟಕರವಾಗಿರುತ್ತದೆ. ಆದುದರಿಂದ ಕುಶಲಕರ್ಮಿಗಳು ಮರಣ ಹೊಂದಿದಾಗ ಅಂತ್ಯ ಸಂಸ್ಕಾರ ವೆಚ್ಚಕ್ಕಾಗಿ ರೂ. 5,000/- ಗಳನ್ನು ನೀಡಲಾಗುವುದು. ಮೇಲಿನ ಯೋಜನೆಯಡಿ ನಿಶ್ಚಿತ ಠೇವಣಿಯಲ್ಲಿ ಇರಿಸಿರುವ ಮೊತ್ತಕ್ಕೆ ಬಂದ ಬಡ್ಡಿ ಹಣದಲ್ಲಿ ಕುಶಲಕರ್ಮಿಗಳು ಮರಣ ಹೊಂದಿದಾಗ ಅಂತ್ಯ ಸಂಸ್ಕಾರದ ವೆಚ್ಚಕ್ಕಾಗಿ ರೂ. 5000/- ಗಳನ್ನು ನೀಡಲಾಗುವುದು.

ನಿಗಮದ ವಿವಿಧ ಯೋಜನಗಳಡಿ ಅಂದರೆ ತರಬೇತಿ ಶಿಬಿರ, ಚರ್ಮಕಾರರ ಕುಠೀರ/ಆಧುನಿಕ ಮಾರಾಟ ಕುಠೀರ ಒದಗಿಸುವ ಯೋಜನೆಯಡಿ/ಇತರೆ ಯೋಜನೆಗಳಡಿ ಪ್ರಯೋಜನ ಪಡೆದ ಫಲಾನುಭವಿಗಳನ್ನು ಮೇಲಿನ ಯೋಜನೆಗಳಡಿ ಅಳವಡಿಸಲಾಗುವುದು.

2016-17ನೇ ಸಾಲಿನಲ್ಲಿ ಈ ಯೋಜನೆಯಡಿ ಉಳಿದ ರೂ. 3.85 ಲಕ್ಷಗಳ ಅನುದಾನವನ್ನು ಈ ಸಾಲಿನಲ್ಲಿ ಬಳಸಿಕೊಳ್ಳಲಾಗುವುದು.

## VII. ಯೋಜನಾ ನಿರ್ವಹಣಾ ವೆಚ್ಚ :

ಪ್ರಸ್ತಾಪಿತ ಯೋಜನೆಗಳ ನಿರ್ವಹಣೆಗೆ ಸಿಬ್ಬಂದಿ ಕೊರತೆ ಇದ್ದು ಅದರಲ್ಲೂ ತಾಂತ್ರಿಕ ಮತ್ತು ಆರ್ & ಡಿ ಸೌಲಭ್ಯಗಳನ್ನು ಹೆಚ್ಚಿಸಿದಲ್ಲಿ ಮಾತ್ರ ನಿರೀಕ್ಷಿತ ಮಟ್ಟದಲ್ಲಿ ಯೋಜನೆಗಳ ಅನುಷ್ಠಾನವನ್ನು ಮಾಡಬಹುದಾಗಿರುತ್ತದೆ.

ವಿಶೇಷವಾಗಿ ಕುಶಲಕರ್ಮಿಗಳಿಗೆ ಉನ್ನತ ಮಟ್ಟದ ತರಭೇತಿ ನೀಡುವಲ್ಲಿ ಮತ್ತು ಯೋಜನೆ ನಿಯಂತ್ರಣ ಮಾಡುವಲ್ಲಿ ತಾಂತ್ರಿಕತೆಯಲ್ಲಿ ಪರಿಣಿತಿ ಹೊಂದಿದ ಸಮಾಲೋಚಕರ ಅವಶ್ಯಕತೆ ಇರುತ್ತದೆ. ಹಾಗೂ ಸಿಬ್ಬಂದಿ ಸಾರಿಗೆ ಮತ್ತಿತರೆ ವೆಚ್ಚಗಳನ್ನು ಮಾಡಬೇಕಾಗಿರುತ್ತದೆ.

ನಿರಂತರ ಉದ್ಯೋಗ ಯೋಜನೆಯಡಿ ಹಾಗೂ ತರಬೇತಿ ಮತ್ತು ಎಸ್.ಹೆಚ್.ಜಿ. ಉತ್ಪಾದಾನ ಕೇಂದ್ರಗಳ ಮೂಲಕ ಸಂಗ್ರಹಿಸಲಾಗುವ ಉತ್ಪನ್ನಗಳನ್ನು ತ್ವರಿತವಾಗಿ ಮಾರಾಟ ಮಾಡುವ ನಿಟ್ಟಿನಲ್ಲಿ, ಹಾಗೂ ಮಾರುಕಟ್ಟೆಯಲ್ಲಿನ Trends ಗೆ ಅನುಗುಣವಾಗಿ ವಿನ್ಯಾಸಗಳ ಅಭಿವೃದ್ಧಿ ಬಗ್ಗೆ ಸಮೀಕ್ಷೆ ಮತ್ತು ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುವ ದೃಷ್ಟಿಯಿಂದ ಸಂಶೋಧನಾ ಕ್ರಮಗಳನ್ನು ಕೈಗೊಳ್ಳುವ ಅವಶ್ಯಕತೆ ಇರುವುದರಿಂದ ಮಾರುಕಟ್ಟೆ ವಿಷಯದಲ್ಲಿ ಪರಿಣಿತಿ ಹೊಂದಿದ ಸಮಾಲೋಚಕರ ಸೇವೆಯು ಅವಶ್ಯವಾಗಿರುತ್ತದೆ.

ಮೇಲ್ಕಂಡ ಎಲ್ಲಾ ಪರಿಣಿತಿಯನ್ನು ಸಮ್ಮಿಲನಗೊಳಿಸಿ ನಿಗಮದ ಕಾರ್ಯ ಚಟುವಟಿಕೆಗಳನ್ನು ನಡೆಸಿಕೊಂಡು ಹೋದಲ್ಲಿ ಮಾತ್ರ ಈಗಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಉಳಿಯಲು ಸಾಧ್ಯವಾಗುತ್ತದೆ. ಆದುದರಿಂದ ಕೆಳಕಂಡ ಪ್ರಸ್ತಾವನೆ.

**1. ತರಬೇತಿ ನಿರ್ವಹಣೆ:**

ರಾಜ್ಯಾದ್ಯಂತ ಜಿಲ್ಲೆಗಳಲ್ಲಿ 30 ತಂಡಗಳಿಗೆ ತರಬೇತಿ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡಿದ್ದು, ಅವುಗಳನ್ನು ಯಶಸ್ವಿಯಾಗಿ ನಿರ್ವಹಣೆ ಮಾಡಲು ಸಿಬ್ಬಂದಿ ಕೊರತೆ ಇರುವುದರಿಂದ ತರಬೇತಿ ಶಿಬಿರಗಳ ನಿರ್ವಹಣೆ ಮತ್ತು ನಿರಂತರ ಮಾರ್ಗದರ್ಶನ ಹಾಗೂ ಗುಣಮಟ್ಟದ ಉತ್ಪನ್ನಗಳ ತಯಾರಿಕೆಯಲ್ಲಿ ಉತ್ಪಾದನಾ ಕೇಂದ್ರಗಳಿಗೆ ಜೀವ ತುಂಬುವ ಸಲಹೆಗಳನ್ನು ನೀಡಿ ಸತತ ಉಸ್ತುವಾರಿ ಕಾರ್ಯ ನಿರ್ವಹಿಸಲು ಅನುಭವಿ ಮತ್ತು ನುರಿತ ತಾಂತ್ರಿಕ ಸಮಾಲೋಚಕರನ್ನು Free lance ಆಧಾರದಲ್ಲಿ ಅಥವಾ ಹೊರ ಗುತ್ತಿಗೆ ಆಧಾರದ ನೇಮಿಸಿಕೊಳ್ಳಲು ಉದ್ದೇಶಿಸಿದೆ.

**2. ಆರ್. & ಡಿ. ಸೌಲಭ್ಯಗಳು :**

R & D Linked production ಮತ್ತು ಯಂತ್ರೋಪಕರಣಗಳ ಆಯ್ಕೆ ಹಾಗೂ ವಿನ್ಯಾಸಗಳ ಅಭಿವೃದ್ಧಿ ಈ ಚಟುವಟಿಕೆಗಳ ನಿರ್ವಹಣೆಗಾಗಿ Rebock, Woodlands ಮತ್ತು ಇತರೆ ಪ್ರತಿಷ್ಠಿತ ಚರ್ಮೋದ್ಯಮ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ಪರಿಣಿತ ಹೊಂದಿದ ತಾಂತ್ರಿಕ ಸಮಾಲೋಚಕರು ಮತ್ತು ಡಿಸೈನರ್ ಸೇವೆಯನ್ನು Free lance ಆಧಾರದಲ್ಲಿ ಅಥವಾ Consultancy ಆಧಾರದಲ್ಲಿ ಬಳಸಿಕೊಳ್ಳುವ ಅವಶ್ಯಕತೆ ಇರುತ್ತದೆ.

**3. ಮಾರುಕಟ್ಟೆ ಸಂಶೋಧನೆ:**

ಇದೇ ರೀತಿ ಮಾರುಕಟ್ಟೆ ಸಂಶೋಧನಾ ವಿಷಯಗಳಲ್ಲಿ ಪರಿಣಿತಿ ಹೊಂದಿದ ಒಬ್ಬ ಮಾರುಕಟ್ಟೆ ಸಮಾಲೋಚಕರನ್ನು Free lance ಅಥವಾ Consultancy ಆಧಾರದಲ್ಲಿ ಬಳಸಿಕೊಳ್ಳುವ ಅವಶ್ಯಕತೆ ಇರುತ್ತದೆ.

ಮೇಲ್ಕಂಡ ಕಾರಣಗಳಿಂದ ಮತ್ತು ಪ್ರಸ್ತಾಪಿಸಿದಂತೆ ಸೌಲಭ್ಯಗಳನ್ನು ಹೊಂದುವ ನಿಟ್ಟಿನಲ್ಲಿ ಯೋಜನಾ ನಿರ್ವಹಣಾ ವೆಚ್ಚ ಅತ್ಯವಶ್ಯವಾಗಿದ್ದು, ಒಟ್ಟು ಯೋಜನಾ ಗಾತ್ರದ ಶೇಕಡ 7 ರಷ್ಟನ್ನು ಅಂದರೆ ರೂ. 331.70 ಲಕ್ಷಗಳನ್ನು ಯೋಜನೆ ನಿರ್ವಹಣಾ ವೆಚ್ಚಕ್ಕಾಗಿ ಕಾಯ್ದಿರಿಸಲಾಗಿದೆ.

**ಸಹಿ/–**
**ವ್ಯವಸ್ಥಾಪಕ ನಿರ್ದೇಶಕರು**

# ಅನುಬಂಧ – 1

## ವಿವಿಧ ಯೋಜನೆಗಳಡಿ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ನಿಗಮವು ರೂಪಿಸಿರುವ ಮಾನದಂಡ / ಅರ್ಹತೆ ಮತ್ತು ವಿಧಿವಿಧಾನಗಳು

### I. ತರಬೇತಿ ಕಾರ್ಯಕ್ರಮಗಳು : –

**2. ಕೌಶಲ್ಯ ಅಭಿವೃದ್ಧಿ ಮತ್ತು ಆದಾಯ ಗಳಿಕೆಗಾಗಿ ತರಬೇತಿ ಶಿಬಿರ : –**

ಉನ್ನತ ಗುಣಮಟ್ಟದ ಮತ್ತು ಆಧುನಿಕ ವಿನ್ಯಾಸದ ಪಾದರಕ್ಷೆ/ ಚರ್ಮ ವಸ್ತುಗಳ ತಯಾರಿಕೆಯಲ್ಲಿ, 60 ದಿನಗಳ ಉನ್ನತ ಮಟ್ಟದ ತರಬೇತಿ ನೀಡಿದ ನಂತರ ಅವರ ಜೀವನೋಪಾಯಕ್ಕೆ ಅನುಕೂಲವಾಗುವಂತೆ ಗುಡಿ ಕೈಗಾರಿಕೆ ಪ್ರಾರಂಭಿಸಲು ಬೇಕಾಗುವ ಯಂತ್ರೋಪಕರಣಗಳನ್ನು ವಿತರಿಸಲಾಗುವುದು.

**ಮಾನದಂಡ**

ಅ) ಕನಿಷ್ಟ ಪಕ್ಷ 100 ರಿಂದ 200 ಕುಶಲಕರ್ಮಿಗಳ ಸಾಂದ್ರತೆ ಇರುವ ಪ್ರದೇಶಗಳಿಗೆ ಅಥವಾ ಲಿಡ್‌ಕರ್ ಕಾಲೋನಿಗಳಿಗೆ ಅಥವಾ ಎಸ್.ಸಿ. ಕಾಲೋನಿಗಳಿಗೆ ಆದ್ಯತೆ ನೀಡುವುದು.

ಆ) ಚರ್ಮ ಉದ್ಯಮದಲ್ಲಿ ತೊಡಗಿರುವ ಕುಶಲಕರ್ಮಿಗಳಿಗೆ ಆದ್ಯತೆ ನೀಡುವುದು.

ಇ) ಪರಿಶಿಷ್ಠ ಜಾತಿಯ ಮಾದಿಗ, ಸಮಗಾರ, ಡೋರ, ಆದಿಜಾಂಬವ, ಮಚಗಾರ, ಮೋಚಿ ಜನಾಂಗದವರಿಗೆ ಸೇರಿದವರಾಗಿರಬೇಕು.

ಈ) ಮಹಿಳಾ ಕುಶಲಕರ್ಮಿಗಳಿಗೆ, ವಿಕಲಚೇತನರಿಗೆ, ವಿದವೆಯರಿಗೆ ಮೊದಲನೆ ಆದ್ಯತೆ ವಿಕಲಚೇತನರಿಗೆ ಶೇಕಡ 3 ರಷ್ಟು ಆದ್ಯತೆ ನೀಡಬೇಕು.

ಉ) ಸ್ವ ಸಹಾಯ ಸಂಘಗಳನ್ನು ರಚಿಸಿಕೊಂಡಿರುವ ಕುಶಲಕರ್ಮಿಗಳಿಗೆ ಆದ್ಯತೆ.

ಊ) ಉದ್ದೇಶಿತ ಫಲಾನುಭವಿಗಳು ನಿರುದ್ಯೋಗಿಗಳಾಗಿದ್ದು, ಯಾವುದೇ ನೌಕರಿಯಲ್ಲಿ ಇರಬಾರದು.

ಋ) ಒಂದು ಕುಟುಂಬದಲ್ಲಿ ಒಬ್ಬ ಕುಶಲಕರ್ಮಿಗೆ ಮಾತ್ರ ಅವಕಾಶ ನೀಡುವುದು (ಕುಟುಂಬ ಎಂದರೆ ಗಂಡ, ಹೆಂಡತಿ ಮತ್ತು ಮದುವೆಯಾಗದ ಮಕ್ಕಳು)

**ಅರ್ಹತೆ :**

ಅ) ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳ ಕುಟುಂಬದವರಾಗಿರಬೇಕು.

ಆ) ಕನಿಷ್ಟ 20 ವರ್ಷ ವಯಸ್ಸು ಮೀರಿರಬೇಕು. ಮತ್ತು 50 ವರ್ಷದ ಒಳಗಿರಬೇಕು.

ಇ) ಕುಟುಂಬದ ವಾರ್ಷಿಕ ಆದಾಯ ಗ್ರಾಮೀಣ ಪ್ರದೇಶದವರಿಗೆ ರೂ. 40,000/– ಮತ್ತು ನಗರ ಪ್ರದೇಶದವರಿಗೆ ರೂ.55,000/– ಗಳ ಒಳಗಿರಬೇಕು.

**ವಿಧಿವಿಧಾನ :**

ಅ) ಈ ಯೋಜನೆ ಅನುಷ್ಠಾನಗೊಳಿಸುವ ಮುನ್ನ ಯೋಜನೆ ಬಗ್ಗೆ ಸ್ಥಳೀಯವಾಗಿ ಪ್ರಚಾರ ಮಾಡಿ ಅರ್ಜಿಗಳನ್ನು ಅಹ್ವಾನಿಸುವುದು

ಆ) ಡಾ: ಬಿಜೆಆರ್‌ಎಲ್‌ಐಡಿಸಿ, ಜಿಲ್ಲಾ ಸಂಯೋಜಕರು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳಿಂದ ಅರ್ಜಿಗಳನ್ನು ಕ್ರೂಡೀಕರಿಸಿ ಪರಿಶೀಲನೆ ನಂತರ ಸಂಬಂಧಪಟ್ಟ ಕ್ಷೇತ್ರದ ಶಾಸಕರ ಗಮನಕ್ಕೆ ತಂದು ಜಿಲ್ಲಾ ಸಮಿತಿ ಮುಂದೆ ಮಂಡಿಸುವುದು.

ಇ) ಜಿಲ್ಲಾ ಸಮಿತಿಯು ಜಂಟಿ ನಿರ್ದೇಶಕರು / ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರೊಂದಿಗೆ ಕಾರ್ಯ ನಿರ್ವಹಿಸುವುದು

1) ಜಿಲ್ಲಾ ವ್ಯವಸ್ಥಾಪಕರು ಡಾ: ಅಂ.ಅ.ನಿ.ನಿ. – ಸದಸ್ಯರು

2) ಡಾ: ಬಿಜೆಆರ್‌ಎಲ್‌ಐಡಿಸಿ, ಜಿಲ್ಲಾ ಸಂಯೋಜಕರು – ಸದಸ್ಯ ಕಾರ್ಯದರ್ಶಿ

ಈ) ಮೇಲಿನ ಸಮಿತಿಯು ಫಲಾನುಭವಿಗಳನ್ನು ಆಯ್ಕೆ ಮಾಡಿದ ನಂತರ ದೃಢೀಕರಣ ಪಡೆದು ಡಾ:ಬಿಜೆಆರ್‌ಎಲ್‌ಐಡಿಸಿ, ಜಿಲ್ಲಾ ಸಂಯೋಜಕರು ಪಟ್ಟಿಯನ್ನು ಪ್ರಧಾನ ಕಛೇರಿಗೆ ಸಲ್ಲಿಸುವುದು.

ಉ) ಆಯ್ಕೆ ಪಟ್ಟಿಗೆ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆ ಪಡೆದು ಆಯ್ಕೆ ಪಟ್ಟಿಯನ್ನು ಸಂಬಂಧಿಸಿದ ಜಿಲ್ಲಾ ಘಟಕಗಳ ಸೂಚನಾ ಫಲಕದಲ್ಲಿ ಪ್ರಕಟಿಸುವುದು ನಂತರ ಯೋಜನೆ ಜಾರಿಗೊಳಿಸುವುದು.

**2) ಮಾನವ ಸಂಪನ್ಮೂಲ ಅಭಿವೃದ್ದಿ ಮತ್ತು ಕೌಶಲ್ಯ ವೃದ್ದಿ ಯೋಜನೆ :**

ಪರಿಶಿಷ್ಠ ಜಾತಿ ಯುವಕ /ಯುವತಿಯರನ್ನು ಚರ್ಮ ತಾಂತ್ರಿಕತೆ ಉನ್ನತೀಕರಣ ಮತ್ತು ಕೌಶಲ್ಯ ವೃದ್ದಿ ತರಬೇತಿಗಾಗಿ **ಅಲ್ಪಾವಧಿ ಮತ್ತು ಧೀರ್ಘಾವಧಿ ಕೋರ್ಸ್‌ಗಳಿಗೆ** ಪ್ರತಿಷ್ಠಿತ ತರಬೇತಿ ಸಂಸ್ಥೆಗಳಿಗೆ ನಿಯೋಜಿಸುವುದು.

<u>**ಮಾನದಂಡ**</u>

ಅ) ಪರಿಶಿಷ್ಠ ಜಾತಿಯ ಮಾದಿಗ, ಸಮಗಾರ, ಡೋರ, ಆದಿಜಾಂಬವ, ಮಚಗಾರ, ಮೋಚಿ ಜನಾಂಗಕ್ಕೆ ಸೇರಿದವರಾಗಿರಬೇಕು.

ಆ) ವಿವಿಧ ಕೋರ್ಸ್‌ಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆ ಈ ಕೆಳಕಂಡಂತಿದೆ.

1. ಮೂರು ತಿಂಗಳ ಅಲ್ಪಾವಧಿ ಕೋರ್ಸ್ – ಅಭ್ಯರ್ಥಿಗಳು ಕನಿಷ್ಠ ಪಕ್ಷ ಎಂಟನೇ ತರಗತಿ ಪಾಸಾಗಿದ್ದು, ಎಸ್‌ಎಸ್‌ಎಲ್‌ಸಿ ಅನುತೀರ್ಣರಾಗಿದ್ದರೂ ಪರಿಗಣಿಸುವುದು.
2. ಒಂದು ವರ್ಷದ ಸರ್ಟಿಫಿಕೇಟ್ ಕೋರ್ಸ್ – ಅಭ್ಯರ್ಥಿಗಳು ಕನಿಷ್ಠ ಪಕ್ಷ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರಬೇಕು.
3. ಮೂರು ವರ್ಷದ ಡಿಪ್ಲೋಮಾ ಇನ್ ಲೆದರ್ ಟೆಕ್ನಾಲಜಿ ಕೋರ್ಸ್ – ಎಸ್ ಎಸ್ ಎಲ್ ಸಿ / ಪಿಯುಸಿ ಉತ್ತೀರ್ಣರಾಗಿರಬೇಕು.
4. 18 ತಿಂಗಳ ಪಿಜಿ ಹೈಯರ್ ಡಿಪ್ಲೋಮಾ ಇನ್ ಫುಟ್‌ವೇರ್ ಮ್ಯಾನುಫ್ಯಾಕ್ಚರಿಂಗ್ ಅಂಡ್ ಮ್ಯಾನೇಜ್ ಮೆಂಟ್ ಸ್ಟಡಿಸ್ – ಯಾವುದೇ ವಿಷಯದಲ್ಲಿ ಪದವೀಧರರಾಗಿರಬೇಕು. (ಇಂಜಿನಿಯರಿಂಗ್ ಮತ್ತು ಎಂಬಿ.ಎ/ ಹಾಗೂ ವಿಜ್ಞಾನ ಪದವೀಧರರಿಗೆ ಆದ್ಯತೆ ನೀಡಲಾಗುವುದು).

**ಅರ್ಹತೆ :**

ಅ) ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳ ಕುಟುಂಬದವರಾಗಿರಬೇಕು.

ಆ) ಉದ್ದೇಶಿತ ಕುಶಲಕರ್ಮಿಗಳ ವಯಸ್ಸು 20 ರ ಮೇಲ್ಪಟ್ಟಿದ್ದು 40 ವರ್ಷ ಮೀರಿರಬಾರದು.

ಇ) ಕುಟುಂಬದ ವಾರ್ಷಿಕ ಆಧಾಯ ಗ್ರಾಮೀಣ ಪ್ರದೇಶದವರಿಗೆ ರೂ. 40,000/– ಮತ್ತು ನಗರ ಪ್ರದೇಶದವರಿಗೆ ರೂ.55,000/– ಗಳ ಒಳಗಿರಬೇಕು.

ಈ) ಸರ್ಕಾರಿ / ಅರೆ ಸರ್ಕಾರಿ / ಖಾಸಗಿ ಸಂಸ್ದೆಗಳ ನೌಕರರಾಗಿರಬಾರದು.

**ವಿಧಿವಿಧಾನ :**

ಅ) ಈ ಯೋಜನೆ ಪ್ರಚಾರಗೊಳಿಸಿ ಅರ್ಜಿಗಳನ್ನು ಆಹ್ವಾನಿಸುವುದು.

ಆ) ಡಾ: ಬಿಜೆಆರ್‌ಎಲ್‌ಐಡಿಸಿ ಲಿಮಿಟೆಡ್., ಜಿಲ್ಲಾ ಸಂಯೋಜಕರು ಅರ್ಜಿಗಳನ್ನು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳಿಂದ ಅರ್ಜಿಗಳನ್ನು ಕ್ರೂಡೀಕರಿಸಿ ಪರಿಶೀಲಿನೆ ನಂತರ ಸಂಬಂಧಪಟ್ಟ ಕ್ಷೇತ್ರದ ಶಾಸಕರ ಗಮನಕ್ಕೆ ತಂದು ಜಿಲ್ಲಾ ಸಮಿತಿ ಮುಂದೆ ಆಯ್ಕೆಗಾಗಿ ಮಂಡಿಸುವುದು. ಜಿಲ್ಲಾ ಸಮಿತಿಯಲ್ಲಿ ನಿರೀಕ್ಷಿತ ಸಂಖ್ಯೆಯಲ್ಲಿ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ನಿಗಮದಿಂದ ಪ್ರತ್ಯೇಕ ಪ್ರಕಟಣೆ ಹೊರಡಿಸಿ ಪ್ರಧಾನ ಕಛೇರಿ ಮಟ್ಟದಲ್ಲೇ ಅಭ್ಯರ್ಥಿಗಳನ್ನು ಆಯ್ಕೆ ಮಾಡಬಹುದಾಗಿದೆ.

ಇ) ಜಿಲ್ಲಾ ಸಮಿತಿ / ಪ್ರಧಾನ ಕಛೇರಿ ಅಧಿಕಾರಿಗಳ ಸಮಿತಿ ಅನುಮೋದನೆ ಪಡೆದು ದೃಡೀಕರಣ ಪಡೆದನಂತರ ಆಯ್ಕೆ ಪಟ್ಟಿಯನ್ನು ಪ್ರಧಾನ ಕಛೇರಿಗೆ / ವ್ಯವಸ್ಥಾಪಕ ನಿರ್ದೇಶಕರಿಗೆ ಕಳುಹಿಸುವುದು.

ಈ) ಆಯ್ಕೆ ಪಟ್ಟಿಗೆ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆ ಪಡೆದು ಸಂಬಂಧಿಸಿದ ಡಾ: ಬಿಜೆಆರ್‌ಎಲ್‌ಐಡಿಸಿ ಜಿಲ್ಲಾ ಘಟಕಗಳ ಸೂಚನಾ ಫಲಕದಲ್ಲಿ ಪ್ರಕಟಿಸುವುದು ನಂತರ ಯೋಜನೆ ಜಾರಿಗೊಳಿಸುವುದು..

## III. ಸ್ವಯಂ ಉದ್ಯೋಗ ಯೋಜನೆಗಳು : –

**(ಮಾರುಕಟ್ಟೆ ವಿಧಿ ವಿಧಾನಗಳ ಲಿಂಕೇಜ್ ಮತ್ತು ಕುಶಲಕರ್ಮಿಗಳಿಂದ ನೇರವಾಗಿ ಗ್ರಾಹಕರಿಗೆ ಉತ್ಪನ್ನಗಳನ್ನು ತಲುಪಿಸುವ ವ್ಯವಸ್ಥೆ)**

1. **ನಗರ ಪ್ರದೇಶದ ಕುಶಲಕರ್ಮಿಗಳಿಗೆ ನೇರ ಮಾರಾಟ ಮಳಿಗೆ ಪ್ರಾರಂಭಿಸಲು ಸಹಾಯಧನ ಒದಗಿಸುವುದು.**

**ಮಾನದಂಡ :**

1. ಅ) ಉದ್ದೇಶಿದ ಫಲಾನುಭವಿಗಳು ಪರಿಶಿಷ್ಟ ಜಾತಿಯ ಮಾದಿಗ, ಸಮಗಾರ, ಡೋರ, ಆದಿಜಾಂಬವ, ಮಚಗಾರ, ಮೋಚಿ ಜನಾಂಗ ಮತ್ತು ಚರ್ಮ ಕುಶಲಕರ್ಮಿಗಳ ಕುಟುಂಬದವರಾಗಿರಬೇಕು.

ಆ) ಅರ್ಜಿದಾರರು ಚರ್ಮ ಕುಶಲಕರ್ಮಿಗಳಾಗಿದ್ದು ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಕೌಶಲ್ಯ ವೃದ್ಧಿ ಯೋಜನೆಯಡಿ ಅಥವಾ ಕೌಶಲ್ಯ ಅಭಿವೃದ್ಧಿ ಮತ್ತು ಆದಾಯ ಗಳಿಕೆಗಾಗಿ ತರಬೇತಿ ಶಿಬಿರ ಯೋಜನೆ ಅಡಿ ತರಬೇತಿ ಪಡೆದಿರಬೇಕು.

**ಅರ್ಹತೆ :**

ಅ) ಕುಶಲಕರ್ಮಿಗಳು ಉತ್ಪಾದನೆ ಕೆಲಸದಲ್ಲಿ ತೊಡಗಿರಬೇಕು

ಆ) ತರಬೇತಿ ನಂತರ  ಸ್ವಸಹಾಯ ಸಂಘ ರಚಿಸಿಕೊಂಡಿರುವ ಕುಶಲಕರ್ಮಿಗಳಿಗೆ ಆದ್ಯತೆ.

ಇ) ಉತ್ಪನ್ನಗಳನ್ನು ಮಾರಾಟ ಮಾಡುವ ಆಸಕ್ತಿ ಹೊಂದಿರಬೇಕು.

ಇ) ಕನಿಷ್ಟ ವಯಸ್ಸು 20  ವರ್ಷ ಮೇಲ್ಪಟ್ಟಿರಬೇಕು.ಮತ್ತು 50 ವರ್ಷದ ಒಳಗಿರಬೇಕು.

ಉ) ಸಹಾಯ ಧನ ಪಡೆಯುವ ಮೊದಲು ಬ್ಯಾಂಕಿನಿಂದ ಸಾಲ ಮಂಜೂರಾಗಿರಬೇಕು.

ಉ) ಕುಟುಂಬದ ವಾರ್ಷಿಕ ಆಧಾಯ ಗ್ರಾಮೀಣ ಪ್ರದೇಶದವರಿಗೆ ರೂ. 40,000/– ಮತ್ತು ನಗರ ಪ್ರದೇಶದವರಿಗೆ ರೂ.55,000/– ಗಳ ಒಳಗಿರಬೇಕು.

ಊ) ತರಬೇತಿ ಪ್ರಮಾಣ ಪತ್ರ ಹೊಂದಿರಬೇಕು.

**ವಿಧಿವಿಧಾನ :**

ಅ) ಈ ಯೋಜನೆಯನ್ನು ಪ್ರಚಾರ ಮಾಡಿ ಅರ್ಜಿಗಳನ್ನು ಅಹ್ವಾನಿಸುವುದು.

ಆ) ಅರ್ಜಿಗಳನ್ನು ಕ್ರೂಡೀಕರಿಸಿ ಡಾ: ಬಿಜೆಆರ್ ಚ.ಕೈ.ಅ.ನಿ. ಜಿಲ್ಲಾ ಸಂಯೋಜಕರು ಸ್ಥಳ ಪರಿಶೀಲನೆ ಮಾಡಿ ಸಂಬಂಧಪಟ್ಟ ಕ್ಷೇತ್ರದ ಶಾಸಕರ ಗಮನಕ್ಕೆ ತಂದು ಜಿಲ್ಲಾ ಆಯ್ಕೆ ಸಮಿತಿ ಮುಂದೆ ಮಂಡಿಸುವುದು.

ಈ) ಜಿಲ್ಲಾ ಸಮಿತಿಯಲ್ಲಿ ಅನುಮೋದನೆಗೊಂಡು ದೃಡೀಕರಣ ಪಡೆದ ನಂತರ ಪಟ್ಟಿಯನ್ನು ಕೇಂದ್ರ ಕಛೇರಿಗೆ ಕಳುಹಿಸುವುದು.

ಉ) ಯೋಜನೆ ವಿವರಗಳಡಿ ತೋರಿಸಿರುವಂತೆ ವಿಧಾನಗಳನ್ನು ಪಾಲಿಸಿ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆಯೊಂದಿಗೆ ಕಾರ್ಯಕ್ರಮ ಜಾರಿಗೊಳಿಸುವುದು/ ಸಹಾಯಧನ ಬಿಡುಗಡೆ ಮಾಡುವುದು.

**2. ಗ್ರಾಮ /ಹೋಬಳಿ/ ಪಟ್ಟಣ ಪಂಚಾಯಿತಿ ಪ್ರದೇಶದ ಕುಶಲಕರ್ಮಿಗಳಿಗೆ ಆಧುನಿಕ ಕುಠೀರಗಳನ್ನು ಒದಗಿಸುವ ಯೋಜನೆ :–**

**ಮಾನದಂಡ :**

ಅ) ಚರ್ಮ ಕುಶಲಕರ್ಮಿಗಳಾಗಿದ್ದು ಪರಿಶಿಷ್ಠ ಜಾತಿಯ ಮಾದಿಗ, ಸಮಗಾರ, ಡೋರ, ಆದಿಜಾಂಬವ, ಮಚಗಾರ, ಮೋಚಿ ಜನಾಂಗಕ್ಕೆ ಸೇರಿದ ಮತ್ತು ಇತರೇ ಸಂಪ್ರಾದಾಯಿಕ ಚರ್ಮ ಕುಶಲಕರ್ಮಿಗಳ ಕುಟುಂಬಕ್ಕೆ ಸೇರಿದವರಾಗಿರಬೇಕು.

ಆ) ಈ ಹಿಂದೆ ನಿಗಮದಿಂದ ಚರ್ಮಕಾರರ ಕುಠೀರ ಪಡೆದಿರಬಾರದು/ಪಡೆದಿದ್ದಲ್ಲಿ 10 ವರ್ಷಕ್ಕಿಂತ ಮೇಲ್ಪಟ್ಟು ಜಖಂ ಗೊಂಡಿರಬೇಕು.

ಇ) ಚರ್ಮ ಉದ್ಯೋಗದಲ್ಲಿ ತೊಡಗಿರಬೇಕು.

ಈ) ಒಂದು ಕುಟುಂಬದಲ್ಲಿ ಒಬ್ಬರೇ ಮಾತ್ರ ಕುಠೀರ ಪಡೆಯಲು ಅರ್ಹರಾಗಿರುತ್ತಾರೆ.

ಉ) ವಿಕಲಚೇತನರಿಗೆ / ಮಹಿಳೆಯರಿಗೆ / ವಿಧವೆಯರಿಗೆ ಆದ್ಯತೆ ನೀಡುವುದು. ವಿಕಲಚೇತನರಿಗೆ ಶೇಕಡ 3 ರಷ್ಟು ಅಧ್ಯತೆ ನೀಡಬೇಕು.

ಋ) ಗ್ರಾಮ/ ಹೋಬಳಿ/ ಪಟ್ಟಣ ಪಂಚಾಯಿತಿ ಪ್ರದೇಶದ ಕುಶಲಕರ್ಮಿಗಳಿಗೆ ಆದ್ಯತೆ.

**ಅರ್ಹತೆ :**

ಅ) ಕುಶಲಕರ್ಮಿಗಳು ಚರ್ಮ ವೃತ್ತಿಯಲ್ಲಿ ತೊಡಗಿರಬೇಕು.

ಆ) ಕನಿಷ್ಟ ವಯಸ್ಸು 20ವರ್ಷ ಮೇಲ್ಪಟ್ಟಿರಬೇಕು. ಮತ್ತು 50 ವರ್ಷದ ಒಳಗಿರಬೇಕು.

ಇ) ಆಸಕ್ತಿಯುಳ್ಳ ಫಲಾನುಭವಿಗಳು ಆಧುನಿಕ ಕುಠೀರ ಹೊಂದಲು ಸ್ಥಳ ಗುರುತಿಸಿ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಂದ ಪರವಾನಿಗೆ ಪಡೆದುಕೊಳ್ಳಬೇಕು.

ಈ) ನಿಗಮವು ನಿಗದಿಪಡಿಸುವ ವಂತಿಗೆ ಹಣ ನೀಡಲು ಶಕ್ತರಿರಬೇಕು.

ಉ) ಕುಟುಂಬದ ವಾರ್ಷಿಕ ಆಧಾಯ ಗ್ರಾಮೀಣ ಪ್ರದೇಶದವರಿಗೆ ರೂ. 40,000/– ಮತ್ತು ನಗರ ಪ್ರದೇಶದವರಿಗೆ ರೂ.55,000/– ಗಳ ಒಳಗಿರಬೇಕು.

ಊ) ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಂದ ವೃತ್ತಿ ಪ್ರಮಾಣ ಪತ್ರ ಪಡೆದಿರಬೇಕು.

**ವಿಧಿವಿಧಾನ :**

ಅ) ಈ ಯೋಜನೆಯನ್ನು ಪ್ರಚಾರ ಮಾಡಿ ಅರ್ಜಿಗಳನ್ನು ಅಹ್ವಾನಿಸುವುದು.

ಆ) ಅರ್ಜಿಗಳನ್ನು ಕ್ರೂಡೀಕರಿಸಿ ಡಾ: ಬಿಜೆಆರ್ಎಲ್ಐಡಿಸಿ ಜಿಲ್ಲಾ ಸಂಯೋಜಕರು ಸ್ಥಳ ಪರಿಶೀಲನೆ ಮಾಡಿ ಸಂಬಂಧಪಟ್ಟ ಕ್ಷೇತ್ರದ ಶಾಸಕರ ಗಮನಕ್ಕೆ ತಂದು ಜಿಲ್ಲಾ ಸಮಿತಿ ಮುಂದೆ ಮಂಡಿಸುವುದು.

ಇ) ಜಿಲ್ಲಾ ಸಮಿತಿಯಲ್ಲಿ ಅನುಮೋದನೆಗೊಂಡು ದೃಡೀಕರಣ ಪಡೆದ ನಂತರ ಪಟ್ಟಿಯನ್ನು ಆಯ್ಕೆ ಕೇಂದ್ರ ಕಛೇರಿಗೆ ಕಳುಹಿಸುವುದು.

ಈ) ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆಯೊಂದಿಗೆ ಕಾರ್ಯಕ್ರಮ ಜಾರಿಗೊಳಿಸುವುದು.

**3. ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಸಹಾಯ ಒದಗಿಸುವ ಯೋಜನೆ:**

ಕುಶಲಕರ್ಮಿಗಳು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಸಹಾಯ ಒದಗಿಸುವ ನಿಟ್ಟಿನಲ್ಲಿ ನುರಿತ ಕುಶಲಕರ್ಮಿಗಳಿಂದ ಬೇಡಿಕೆ & ಗುಣಮಟ್ಟ ಆಧಾರದ ಮೇಲೆ ನಿಗಮವು ಖರೀದಿಸಿ ಲಿಡ್‌ಕರ್ ಮಳಿಗೆಗಳಲ್ಲಿ ಮಾರಾಟ ಮಾಡುವುದು.

**ಮಾನದಂಡ :**

ಅ) ಉದ್ದೇಶಿತ ಕುಶಲಕರ್ಮಿಗಳು ಪರಿಶಿಷ್ಟ ಜಾತಿಯ ಮಾದಿಗ, ಸಮಗಾರ, ಡೋರ, ಆದಿಜಾಂಬವ, ಮಚಗಾರ, ಮೋಚಿ ಜನಾಂಗ ಮತ್ತು ಇತರೇ ಚರ್ಮ ಕುಶಲಕರ್ಮಿಗಳ ಕುಟುಂಬದವರಾಗಿರಬೇಕು.

ಆ) ಡಾ: ಬಿ.ಜೆ.ಆರ್.ಚ.ಕೈ.ಅ.ನಿ.ದ ಸಂಕೀರ್ಣಗಳಲ್ಲಿ ವಸತಿ ಕಾರ್ಯಾಗಾರ ಪಡೆದು ವಾಸಿಸುತ್ತಿರುವ ಚರ್ಮ ಕುಶಲಕರ್ಮಿಗಳಿಗೆ ಮೊದಲನೆ ಆದ್ಯತೆ. ಡಾ: ಬಿ.ಜೆ.ಆರ್.ಎಲ್.ಐ.ಡಿ.ಸಿ ಸಂಸ್ಥೆಯಿಂದ ತರಬೇತಿ ಪಡೆದ ಕುಶಲಕರ್ಮಿಗಳಿಗೆ 2ನೇ ಅಧ್ಯತೆ.

ಇ) ಡಾ: ಬಿ.ಜೆ.ಆರ್.ಚ.ಕೈ.ಅ.ನಿ. ಸಂಸ್ಥೆಯಿಂದ ರಸ್ತೆಬದಿ ಕುಟೀರ ಪಡೆದಿರುವ ಫಲಾನುಭವಿಗಳಿಗೆ 3ನೇ ಅಧ್ಯತೆ, ನಂತರ ಚರ್ಮ ವೃತ್ತಿಯಲ್ಲಿ ತೊಡಗಿರುವ ಇತರೇ ಕುಶಲಕರ್ಮಿಗಳಿಗೆ ಆದ್ಯತೆ ನೀಡುವುದು.

ಈ) ಉದ್ದೇಶಿತ ಕುಶಲಕರ್ಮಿಗಳು ಚರ್ಮಕಾರರ ವೃತ್ತಿಯಲ್ಲಿದ್ದು ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿರಬೇಕು.

ಉ) ಶೂ / ಪಾದರಕ್ಷೆ / ಚರ್ಮ ವಸ್ತುಗಳ ತಯಾರಿಕೆಯಲ್ಲಿ ಅನುಭವ ಹೊಂದಿರಬೇಕು.

ಊ) ನಿಗಮದಿಂದ ನೀಡಲಾಗುವ ವಿನ್ಯಾಸ / ಮಾದರಿಗಳಂತೆ ಉತ್ಪನ್ನಗಳನ್ನು ತಯಾರಿಸಲು ಸಿದ್ದರಿರಬೇಕು.

ಋ) ಉದ್ದೇಶಿತ ಕುಶಲಕರ್ಮಿಗಳು ನಿಗಮದ ಷರತ್ತು ಮತ್ತು ನಿಬಂಧನೆಗಳಿಗೆ ಒಪ್ಪಿ ಒಡಂಬಡಿಕೆ ಮಾಡಿ ಕೊಳ್ಳಲು ಸಿದ್ದರಿರಬೇಕು.

**ಅರ್ಹತೆ :**

ಅ) ಕುಶಲಕರ್ಮಿಗಳು ಪರಿಶಿಷ್ಠ ಜಾತಿಯವರಾಗಿದ್ದು, ಚರ್ಮ ಕುಶಲಕರ್ಮಿಗಳ ಕುಟುಂಬದವರಾಗಿರಬೇಕು.

ಆ) ಕುಶಲಕರ್ಮಿಗಳು ಉತ್ಪಾದನೆ ಕೆಲಸದಲ್ಲಿ ತೊಡಗಿರಬೇಕು.

ಇ) ಕನಿಷ್ಟ ವಯಸ್ಸು 20 ವರ್ಷ ಮೇಲ್ಪಟ್ಟಿರಬೇಕು. ಮತ್ತು 50 ವರ್ಷದ ಒಳಗಿರಬೇಕು.

ಈ) ಕುಟುಂಬದ ವಾರ್ಷಿಕ ಆಧಾಯ ಗ್ರಾಮೀಣ ಪ್ರದೇಶದವರಿಗೆ ರೂ. 40,000/– ಮತ್ತು ನಗರ ಪ್ರದೇಶದವರಿಗೆ ರೂ.55,000/– ಗಳ ಒಳಗಿರಬೇಕು.

ಉ) ಲಿಡ್‌ಕರ್ ತಾಂತ್ರಿಕ ವಿಭಾಗದಿಂದ ಪಡೆದ ಚರ್ಮ ಕೌಶಲ್ಯ ಪ್ರಮಾಣ ಪತ್ರ ಹೊಂದಿರಬೇಕು.

**ವಿಧಿವಿಧಾನ :**

ಅ) ಈ ಯೋಜನೆಯನ್ನು ಪ್ರಚಾರ ಮಾಡಿ ಅರ್ಜಿಗಳನ್ನು ಅಹ್ವಾನಿಸುವುದು.

ಆ) ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿ ಪಡೆಯುವುದು

ಇ) ಡಾ: ಬಿ.ಜೆ.ಆರ್.ಎಲ್.ಐ.ಡಿ.ಸಿಯ ಜಿಲ್ಲಾ ಸಂಯೋಜಕರು ಪೂರ್ಣ ಪರಿಶೀಲನೆ ನಂತರ ಉದ್ದೇಶಿತ ಫಲಾನುಭವಿಗಳ ಪಟ್ಟಿಯನ್ನು ಮುಖ್ಯ ವ್ಯವಸ್ಥಾಪಕರು (ವಾಣಿಜ್ಯ) ರವರ ಮೂಲಕ ನಿಗಮದ ತಾಂತ್ರಿಕ ವಿಭಾಗಕ್ಕೆ ಸಲ್ಲಿಸುವುದು.

ಈ) ತಾಂತ್ರಿಕ ವಿಭಾಗದಿಂದ ವೃತ್ತಿಪರತೆ ಬಗ್ಗೆ ಪರಿಶೀಲಿಸಿ ದೃಢೀಕರಿಸಿದ ನಂತರ ವ್ಯವಸ್ಥಾಪಕ ನಿರ್ದೇಶಕರ ಅನುಮೋಧನೆ ಪಡೆಯುವುದು.

ಉ) ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆ ನಂತರ ವಾಣಿಜ್ಯ ವಿಭಾಗದಲ್ಲಿ ನೊಂದಾವಣೆ ಮಾಡಿ ಒಡಂಬಡಿಕೆ ಪತ್ರ ಮಾಡಿಕೊಳ್ಳುವುದು.

ಊ) ವಿನ್ಯಾಸ ಆಯ್ಕೆ ಮತ್ತು ದರ ನಿಗದಿ ಸಮಿತಿಯಲ್ಲಿ ಆಯ್ಕೆ ಮಾಡಲಾದ ವಿನ್ಯಾಸಗಳ / ಮಾದರಿಗಳನ್ನು ಪ್ರಯೋಗಿಕವಾಗಿ ಮಾರುಕಟ್ಟೆಗೆ ಬಿಡುಗಡೆ ಮಾಡಲು ನೊಂದಾಯಿತ ಕುಶಲಕರ್ಮಿಗಳಿಂದ ಉತ್ಪನ್ನಗಳನ್ನು ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆಯೊಂದಿಗೆ ಅಲ್ಪ ಪ್ರಮಾಣದಲ್ಲಿ ಸಂಗ್ರಹಿಸುವುದು.

ಋ) ನಂತರ ಬೇಡಿಕೆಗೆ ಅನುಸಾರವಾಗಿ ನೊಂದಾಯಿತ ಕುಶಲಕರ್ಮಿಗಳಿಂದ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆಯೊಂದಿಗೆ ಉತ್ಪನ್ನಗಳನ್ನು ಸಂಗ್ರಹಿಸುವುದು / ಖರೀದಿಸುವುದು.

ೠ) ಯಾವುದೇ ಉತ್ಪನ್ನದ ವಿನ್ಯಾಸ / ಮಾದರಿ outdated ಆಗಿ 90 ದಿನಗಳ ನಂತರವೂ ಮಾರಾಟವಾಗದೇ ಉಳಿದಿದ್ದಲ್ಲಿ ಅಂತಹ ಉತ್ಪನ್ನಗಳ ಸಂಗ್ರಹಣೆಯನ್ನು ನಿಷೇಧಿಸುವುದು.

**6. ಸ್ವಯಂ ಉದ್ಯೋಗಕ್ಕೆ ದುಡಿಮೆ ಬಂಡವಾಳ ಸಾಲ ಯೋಜನೆ:**

**ಮಾನದಂಡ :**

ಅ) ಉದ್ದೇಶಿದ ಫಲಾನುಭವಿಗಳು ಪರಿಶಿಷ್ಟ ಜಾತಿಯ ಮಾದಿಗ, ಸಮಗಾರ, ಡೋರ, ಆದಿಜಾಂಬವ, ಮಚಗಾರ, ಮೋಚಿ ಜನಾಂಗ ಮತ್ತು ಚರ್ಮ ಕುಶಲಕರ್ಮಿಗಳ ಕುಟುಂಬದವರಾಗಿರಬೇಕು.

ಆ) ಶೂ/ಪಾದರಕ್ಷೆ/ಚರ್ಮವಸ್ತುಗಳ ತಯಾರಿಕೆಯಲ್ಲಿ ಅನುಭವ ಹೊಂದಿರಬೇಕು

ಇ) ಉದ್ದೇಶಿತ ಫಲಾನುಭವಿಗಳು ರೂ. 1,00,000/– ದವರೆಗೆ ಬ್ಯಾಂಕ್ ಸಾಲ ಪಡೆಯಲು ಬ್ಯಾಂಕ್‌ಗಳನ್ನು ಗುರುತಿಸಿರಬೇಕು.

**ಅರ್ಹತೆ :**

ಅ) ಕುಶಲಕರ್ಮಿಗಳು ಉತ್ಪಾದನೆ ಕೆಲಸದಲ್ಲಿ ತೊಡಗಿರಬೇಕು

ಆ) ಕನಿಷ್ಟ ವಯಸ್ಸು 20 ವರ್ಷ ಮೇಲ್ಪಟ್ಟಿರಬೇಕು.

ಇ) ಸಹಾಯ ಧನ ಪಡೆಯುವ ಮೊದಲು ಬ್ಯಾಂಕ್ ನಲ್ಲಿ ಸಾಲ ಮಂಜೂರಾತಿ ಆಗಿರುವುದನ್ನು ದೃಢೀಕರಿಸಬೇಕು.

ಈ) ಕುಟುಂಬದ ವಾರ್ಷಿಕ ಆಧಾಯ ಗ್ರಾಮೀಣ ಪ್ರದೇಶದವರಿಗೆ ರೂ. 40,000/– ಮತ್ತು ನಗರ ಪ್ರದೇಶದವರಿಗೆ ರೂ. 55,000/– ಗಳ ಒಳಗಿರಬೇಕು.

**ವಿಧಿವಿಧಾನ :**

ಅ) ಈ ಯೋಜನೆಯನ್ನು ಪ್ರಚಾರ ಮಾಡಿ ಅರ್ಜಿಗಳನ್ನು ಅಹ್ವಾನಿಸುವುದು.

ಆ) ಅರ್ಜಿಗಳನ್ನು ಕ್ರೂಡೀಕರಿಸಿ ಡಾ: ಬಿಜೆಆರ್ ಚ.ಕೈ.ಅ.ನಿ. ಜಿಲ್ಲಾ ಸಂಯೋಜಕರು ಸ್ಥಳ ಪರಿಶೀಲನೆ ಮಾಡಿ ಸಂಬಂಧಪಟ್ಟ ಕ್ಷೇತ್ರದ ಶಾಸಕರ ಗಮನಕ್ಕೆ ತಂದು ಜಿಲ್ಲಾಧಿಕಾರಿಗಳ ಸಮಿತಿ ಮುಂದೆ ಮಂಡಿಸುವುದು.

ಇ) ಜಿಲ್ಲಾ ಸಮಿತಿಯಲ್ಲಿ ಅನುಮೋದನೆಗೊಂಡು ಧೃಢೀಕರಣ ಪಡೆದ ನಂತರ ಪಟ್ಟಿಯನ್ನು ಕೇಂದ್ರ ಕಛೇರಿಗೆ ಕಳುಹಿಸುವುದು.

ಈ) ಯೋಜನೆ ವಿವರಗಳಡಿ ತೋರಿಸಿರುವಂತೆ ವಿಧಾನಗಳನ್ನು ಪಾಲಿಸಿ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆಯೊಂದಿಗೆ ಕಾರ್ಯಕ್ರಮ ಜಾರಿಗೊಳಿಸುವುದು/ ಸಹಾಯಧನ ಬಿಡುಗಡೆ ಮಾಡುವುದು.

## IV. ಮೂಲಭೂತ ಸೌಕರ್ಯಗಳು :–

**1. ಚರ್ಮ ಕುಶಲಕರ್ಮಿಗಳಿಗೆ "ಡಾ: ಬಾಬು ಜಗಜೀವನ ರಾಂ ವಸತಿ ಕಾರ್ಯಾಗಾರ ನಿರ್ಮಾಣ ಯೋಜನೆ" :**

<u>ಮಾನದಂಡ/ ಅರ್ಹತೆ/ ವಿಧಿವಿಧಾನ :</u>

ಸರ್ಕಾರಿ ಆದೇಶ ಸಂಖ್ಯೆ : ಸಕಇ 37 ಎಸ್‌ಎಲ್‌ಪಿ 2015, ಬೆಂಗಳೂರು, ದಿನಾಂಕ: 09–09–2015 ರಂತೆ ಈ ಯೋಜನೆಯನ್ನು ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಅನುಷ್ಠಾನಗೊಳಿಸಬೇಕಾಗಿದ್ದು ಈ ಆದೇಶದಲ್ಲಿ ನಿಗದಿಪಡಿಸಿರುವ ಮಾನದಂಡಗಳು/ ಅರ್ಹತೆ ಮತ್ತು ವಿಧಿವಿಧಾನಗಳನ್ನು ಅನುಸರಿಸಬೇಕು.

**2. ವಸತಿ ಕಾರ್ಯಾಗಾರ ನಿರ್ಮಿಸಲು ಜಮೀನು ಖರೀದಿಸುವುದು ಮತ್ತು ಜಿ+2 / ವೈಯುಕ್ತಿಕ ಮಾದರಿಯವಸತಿ ಸಹಿತ ಕಾರ್ಯಾಗಾರಗಳನ್ನು ನಿರ್ಮಿಸುವುದು:**

<u>ಮಾನದಂಡ :</u>

ಅ) ಚರ್ಮ ಕುಶಲಕರ್ಮಿಗಳಾಗಿದ್ದು ಪರಿಶಿಷ್ಠ ಜಾತಿಯ ಮಾದಿಗ, ಸಮಗಾರ, ಡೋರ, ಆದಿಜಾಂಬವ, ಮಚಗಾರ, ಮೋಚಿ ಜನಾಂಗಕ್ಕೆ ಸೇರಿದ ಮತ್ತು ಇತರೇ ಸಂಪ್ರಾದಾಯಿಕ ಚರ್ಮ ಕುಶಲಕರ್ಮಿಗಳ ಕುಟುಂಬಕ್ಕೆ ಸೇರಿದವರಾಗಿರಬೇಕು.

ಆ) ಈ ಹಿಂದೆ ನಿಗಮದಿಂದ ಅಥವಾ ಸರ್ಕಾರದ ಬೇರೆ ಯಾವುದೇ ಯೋಜನೆ ಅಡಿ ನಿವೇಶನ ಅಥವಾ ವಸತಿ ಸೌಲಭ್ಯ ಪಡೆದಿರಬಾರದು.

ಇ) ಚರ್ಮ ಉದ್ಯೋಗದಲ್ಲಿ ತೊಡಗಿರಬೇಕು.

ಈ) ಒಂದು ಕುಟುಂಬದಲ್ಲಿ ಒಬ್ಬರೇ ಮಾತ್ರ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

ಉ) ವಿಕಲಚೇತನರಿಗೆ / ಮಹಿಳೆಯರಿಗೆ / ವಿಧವೆಯರಿಗೆ / ಬೀದಿ ಬದಿ ಕುಳಿತು ಕೆಲಸ ನಿರ್ವಹಿಸುತ್ತಿರುವ ಕುಶಲಕರ್ಮಿಗಳಿಗೆ ಆದ್ಯತೆ ನೀಡುವುದು. ವಿಕಲಚೇತನರಿಗೆ ಶೇಕಡ 3 ರಷ್ಟು ಅಧ್ಯತೆ ನೀಡಬೇಕು.

ಋ) ಗ್ರಾಮ/ ಹೋಬಳಿ/ ಪಟ್ಟಣ ಪಂಚಾಯಿತಿ ಪ್ರದೇಶದ ಕುಶಲಕರ್ಮಿಗಳಿಗೆ ಆದ್ಯತೆ.

<u>ಅರ್ಹತೆ :</u>

ಅ) ಕುಶಲಕರ್ಮಿಗಳು ಚರ್ಮ ವೃತ್ತಿಯಲ್ಲಿ ತೊಡಗಿರಬೇಕು ಮತ್ತು ಯಾವುದೇ ನಿವೇಶನ ಅಥವಾ ವಸತಿ ಹೊಂದಿರಬಾರದು.

ಆ) ಕನಿಷ್ಟ ವಯಸ್ಸು 20ವರ್ಷ ಮೇಲ್ಪಟ್ಟಿರಬೇಕು ಮತ್ತು 50 ವರ್ಷದ ಒಳಗಿರಬೇಕು.

ಇ) ನಿಗಮವು ನಿಗದಿಪಡಿಸುವ ವಂತಿಗೆ ಹಣ ನೀಡಲು ಶಕ್ತರಿರಬೇಕು.

ಈ) ಕುಟುಂಬದ ವಾರ್ಷಿಕ ಆಧಾಯ ಗ್ರಾಮೀಣ ಪ್ರದೇಶದವರಿಗೆ ರೂ. 32,000/– ಮತ್ತು ನಗರ ಪ್ರದೇಶದವರಿಗೆ ರೂ.87,600/– ಗಳ ಒಳಗಿರಬೇಕು.

ಊ) ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಂದ ವೃತ್ತಿ ಪ್ರಮಾಣ ಪತ್ರ ಪಡೆದಿರಬೇಕು.

<u>ವಿಧಿವಿಧಾನ :</u>

ಅ) ಸರ್ಕಾರದಿಂದ ಮಂಜೂರಾತಿ ಪಡೆದ, ಸಂಘ ಸಂಸ್ಥೆಗಳು ನಿಗಮಕ್ಕೆ ಉದುಗೊರೆಯಾಗಿ ನೀಡಿದ ಅಥವಾ ಕುಶಲಕರ್ಮಿಗಳ ಸಂಘ ಸಂಸ್ಥೆಗಳು ಹೊಂದಿರುವ ಜಮೀನಿನಲ್ಲಿ ನಿರ್ಮಿಸಲು ಅದ್ಯತೆ ನೀಡುವುದು.

ಆ) ಈ ಯೋಜನೆಯಡಿ ಜಮೀನು ಮಂಜೂರು ಮಾಡಿದ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳು ಅಥವಾ ಜಮೀನು ಉಡುಗೊರೆಯಾಗಿ ನೀಡಿದ ಸಂಘ ಸಂಸ್ಥೆಗಳು ಅತವಾ ಜಮೀನು ಹೊಂದಿದ ಕುಶಲಕರ್ಮಿಗಳ ಸಂಘ ಸಂಸ್ಥೆಗಳು ಫಲಾಪೇಕ್ಷೆಗಳ ಆಯ್ಕೆ ಪಟ್ಟಿಯನ್ನು ಒದಗಿಸಬಹುದಾಗಿದೆ.

ಆ) ಇತಂಹ ಫಲಫೇಕ್ಷೆಗಳಿಂದ ದಾಖಲೆಗಳ ಸಮೇತ ಅರ್ಜಿಗಳನ್ನು ಪಡೆದು ಕ್ರೂಡೀಕರಿಸಿ ಡಾ: ಬಿಜೆಆರ್‌ಎಲ್‌ಐಡಿಸಿ ಜಿಲ್ಲಾ ಸಂಯೋಜಕರು ಸ್ಥಳ ಪರಿಶೀಲನೆ ಮಾಡಿ ಸಂಬಂಧಪಟ್ಟ ಕ್ಷೇತ್ರದ ಶಾಸಕರ ಗಮನಕ್ಕೆ ತಂದು ಜಿಲ್ಲಾ ಸಮಿತಿ ಮುಂದೆ ಮಂಡಿಸುವುದು.

ಇ) ಜಿಲ್ಲಾ ಸಮಿತಿಯಲ್ಲಿ ಅನುಮೋದನೆಗೊಂಡು ದೃಡೀಕರಣ ಪಡೆದ ನಂತರ ಆಯ್ಕೆ ಪಟ್ಟಿಯನ್ನು ಕೇಂದ್ರ ಕಛೇರಿಗೆ ಕಳುಹಿಸುವುದು.

ಈ) ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆಯೊಂದಿಗೆ ಕಾರ್ಯಕ್ರಮ ಜಾರಿಗೊಳಿಸುವುದು.

## V. ಕಲ್ಯಾಣ ಯೋಜನೆಗಳು :–

**1 ಕುಶಲಕರ್ಮಿಗಳಿಗೆ ವಿಮಾ ಸೌಲಭ್ಯ ಒದಗಿಸುವ ಯೋಜನೆ**

ಮಾನದಂಡ :

ಅ) ಉದ್ದೇಶಿತ ಫಲಾನುಭವಿಗಳು ಪರಿಶಿಷ್ಟ ಜಾತಿಯ ಮಾದಿಗ, ಸಮಗಾರ, ಡೋರ, ಆದಿಜಾಂಬವ, ಮಚಗಾರ, ಮೋಚಿ ಜನಾಂಗ ಮತ್ತು ಇತರೇ ಚರ್ಮ ಕುಶಲಕರ್ಮಿಗಳ ಕುಟುಂಬದವರಾಗಿರಬೇಕು.

ಆ) ಡಾ: ಬಿಜೆಆರ್ಎಲ್ಐಡಿಸಿ, ಸಂಕೀರ್ಣಗಳಲ್ಲಿ ವಸತಿ ಕಾರ್ಯಾಗಾರ ಪಡೆದು ವಾಸಿಸುತ್ತಿರುವ ಚರ್ಮ ಕುಶಲ ಕರ್ಮಿಗಳಿಗೆ ಮೊದಲನೆ ಆದ್ಯತೆ, ಡಾ: ಬಿಜೆಆರ್ ಚ.ಕೈ.ಅ.ನಿ., ಸಂಸ್ಥೆಯ ನಿರಂತರ ಉದ್ಯೋಗ ಯೋಜನೆಯಡಿ ಉತ್ಪನ್ನಗಳನ್ನು ಸರಬರಾಜು ಮಾಡುತ್ತಿರುವ ಕುಶಲಕರ್ಮಿಗಳಿಗೆ 2ನೇ ಅಧ್ಯತೆ, ರಸ್ತೆಬದಿ ಕುಠೀರ ಪಡೆದಿರುವ ಫಲಾನುಭವಿಗಳಿಗೆ 3ನೇ ಅಧ್ಯತೆ, ತರಬೇತಿ ಪಡೆದ ಫಲಾನುಭವಿಗಳಿಗೆ 4ನೇ ಆದ್ಯತೆ, ನಂತರ ಚರ್ಮ ವೃತ್ತಿಯಲ್ಲಿ ತೊಡಗಿರುವ ಇತರೇ ಕುಶಲಕರ್ಮಿಗಳಿಗೆ ಆದ್ಯತೆ ನೀಡುವುದು.

ಇ) ವಿಕಲಚೇತನರಿಗೆ / ಮಹಿಳೆಯರಿಗೆ / ವಿಧವೆಯರಿಗೆ ಆದ್ಯತೆ ನೀಡುವುದು. ವಿಕಲಚೇತನರಿಗೆ ಶೇಕಡ 3 ರಷ್ಟು ಆಧ್ಯತೆ ನೀಡಬೇಕು.

ಈ) ಉದ್ದೇಶಿತ ಫಲಾನುಭವಿಗಳು ಬೇರೆ ಯಾವುದೇ ಸರ್ಕಾರಿ ಯೋಜನೆಯಡಿ ಮೇಲ್ಕಂಡ ಸೌಲತ್ತುಗಳನ್ನು ಪಡೆದಿರಬಾರದು

ಉ) ವಿಮೆ ಸೌಲಭ್ಯ ಪಡೆಯಲು ಕುಟುಂಬದ ಮುಖ್ಯಸ್ದ / ಮುಖ್ಯಸ್ಥೆ ಅರ್ಹರಾಗಿರುತ್ತಾರೆ.

ಅರ್ಹತೆ :

ಅ) ಡಾ: ಬಿಜೆಆರ್ಎಲ್ಐಡಿಸಿ ಯಾವುದೆ ಯೋಜನೆಯಡಿ ಫಲಾನುಭವಿಯಾಗಿರಬೇಕು.

ಆ) ಕುಟುಂಬದ ವಾರ್ಷಿಕ ಆಧಾಯ ಗ್ರಾಮೀಣ ಪ್ರದೇಶದವರಿಗೆ ರೂ. 40,000/– ಮತ್ತು ನಗರ ಪ್ರದೇಶದವರಿಗೆ ರೂ.55,000/– ಗಳ ಒಳಗಿರಬೇಕು.

ವಿಧಿವಿಧಾನ :

ಅ) ಯೋಜನೆ ಬಗ್ಗೆ ಪ್ರಚಾರ ಮಾಡುವುದು.

ಆ) ಡಾ: ಬಿಜೆಆರ್ಎಲ್ಐಡಿಸಿ ಜಿಲ್ಲಾ ಸಂಯೋಜಕರು ಅರ್ಜಿಗಳನ್ನು ಪಡೆದು ಪರಿಶೀಲಿಸಿ ಕ್ರೂಢೀಕರಿಸಿ ತಾಲ್ಲೂಕು/ ಜಿಲ್ಲಾ ಸಮಾಜ ಕಲ್ಯಾಣಾ ಅಧಿಕಾರಿಗಳಿಂದ ದೃಡೀಕರಣ ಪಡೆದು ಪ್ರಧಾನ ಕಛೇರಿಗೆ ಸಲ್ಲಿಸುವುದು.

ಇ) ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆಯೊಂದಿಗೆ ಯೋಜನೆ ಜಾರಿಗೊಳಿಸುವುದು.

**2 ಚರ್ಮಕುಶಲಕರ್ಮಿಗಳು ಮರಣ ಹೊಂದಿದಾಗ ಅಂತ್ಯ ಸಂಸ್ಕಾರದ ವೆಚ್ಚಕ್ಕಾಗಿ ಧನ ಸಹಾಯ ಒದಗಿಸುವುದು**

ಅರ್ಹತೆ :

ಅ) ಉದ್ದೇಶಿತ ಫಲಾನುಭವಿಗಳು ಪರಿಶಿಷ್ಟ ಜಾತಿಯ ಮಾದಿಗ, ಸಮಗಾರ, ಡೋರ, ಆದಿಜಾಂಬವ, ಮಚಗಾರ, ಮೋಚಿ ಜನಾಂಗ ಮತ್ತು ಇತರೆ ಅನುವಂಶೀಯ ಚರ್ಮ ಕುಶಲಕರ್ಮಿಗಳ ಕುಟುಂಬದವರಾಗಿರಬೇಕು.

ಆ) ನಿಗಮದ ವಿವಿಧ ಯೋಜನೆಗಳಡಿ ಫಲಾನುಭವಿಗಳಾಗಿರಬೇಕು

ಇ) ಯೋಜನೆ ಜಾರಿಯಾದಾಗ ಕುಟುಂಬದ ಮುಖ್ಯಸ್ಥ ಮೃತನಾಗಿದ್ದಲ್ಲಿ ಹೆಂಡತಿಯನ್ನು ಕುಟುಂಬದ ವಾರಸುದಾರರು / ಮುಖ್ಯಸ್ಥರೆಂದು ಪರಿಗಣಿಸುವುದು.

ಈ) ಆಧಾರ / ಪಡಿತರ ಚೀಟಿ / ಚುನಾವಣೆ ಗುರುತಿನ ಚೀಟಿ ಯಾವುದಾದರೊಂದನ್ನು ಕಡ್ಡಾಯವಾಗಿ ಹೊಂದಿರಬೇಕು.

**<u>ವಿಧಿವಿಧಾನ :</u>**

ಅ) ಯೋಜನೆ ಬಗ್ಗೆ ಕುಶಲಕರ್ಮಿಗಳಿಗೆ ತಿಳಿಸುವುದು.

ಆ) ಡಾ: ಬಿಜೆಆರ್‌ಎಲ್‌ಐಡಿಸಿ ಜಿಲ್ಲಾ ಸಂಯೋಜಕರು ನಿಗದಿ ಪಡಿಸಿದ ನಮೂನೆಯಲ್ಲಿ ವಿವರಗಳನ್ನು ತುಂಬಿ ಶಿಫಾರಸ್ಸು ಮಾಡಿ ಪಾವತಿಗೆ ಅನುಮತಿ ಕೋರಿ ಪ್ಯಾಕ್ಸ್ ಮೂಲಕ ಪ್ರಧಾನ ಕಛೇರಿಗೆ ಕಳುಹಿಸುವುದು.

ಇ) ಹಣ ಪಾವತಿ ಮಾಡುವ ಮೊದಲು ಮೇಲ್ಕಂಡ ಎಲ್ಲಾ ಮಾನದಂಡ / ಅಂಶಗಳನ್ನು ಚಾಚು ತಪ್ಪದೆ ಪರಿಶೀಲಿಸಿ ಅರ್ಹರಿಗೆ ಮಾತ್ರ ಪಾವತಿಸುವುದು.

ಈ) ಪ್ರಧಾನ ಕಛೇರಿ ನಿರ್ದೇಶನದಂತೆ ಹಣ ಪಾವತಿ ಮಾಡಿ ಧೃಢೀಕರಿಣದೊಂದಿಗೆ ಕೆಳಕಂಡ ದಾಖಾಲಾತಿಗಳನ್ನು ಸಲ್ಲಿಸುವುದು. ಇಲ್ಲದೆ ಹೋದಲ್ಲಿ ಜಿಲ್ಲಾ ಸಂಯೋಜಕರೇ ಪಾವತಿಸಿದ ಮೊತ್ತವನ್ನು ಭರಿಸಬೇಕಾಗುತ್ತದೆ.

1) ಜಾತಿ ಪ್ರಮಾಣ ಪತ್ರ

2) ಚುನಾವಣೆ ಗುರುತಿನ ಚೀಟಿ / ನಿಗಮದಿಂದ ನೀಡಿದ ಗುರುತಿನ ಚೀಟಿ.

3) ಮರಣ ಪ್ರಮಾಣ ಪತ್ರ

## 2. ಕುಶಲಕರ್ಮಿಗಳು ಮರಣ ಹೊಂದಿದಾಗ ಅಂತ್ಯ ಸಂಸ್ಕಾರದ ವೆಚ್ಚಕ್ಕಾಗಿ ಧನ ಸಹಾಯ ಒದಗಿಸುವುದು

<u>ಅರ್ಹತೆ :</u>

ಅ) ಉದ್ದೇಶಿತ ಫಲಾನುಭವಿಗಳು ಪರಿಶಿಷ್ಟ ಜಾತಿಯ ಮಾದಿಗ, ಸಮಗಾರ, ಡೋರ, ಆದಿಜಾಂಬವ, ಮಚಗಾರ, ಮೋಚಿ ಜನಾಂಗ ಮತ್ತು ಇತರೆ ಅನುವಂಶೀಯ ಚರ್ಮ ಕುಶಲಕರ್ಮಿಗಳ ಕುಟುಂಬದವರಾಗಿರಬೇಕು.

ಆ) ನಿಗಮದ ವಿವಿಧ ಯೋಜನೆಗಳಡಿ ಫಲಾನುಭವಿಗಳಾಗಿರಬೇಕು

ಇ) ಯೋಜನೆ ಜಾರಿಯಾದಾಗ ಕುಟುಂಬದ ಮುಖ್ಯಸ್ಥ ಮೃತನಾಗಿದ್ದಲ್ಲಿ ಹೆಂಡತಿಯನ್ನು ಕುಟುಂಬದ ವಾರಸುದಾರರು / ಮುಖ್ಯಸ್ಥರೆಂದು ಪರಿಗಣಿಸುವುದು.

ಈ) ಆಧಾರ / ಪಡಿತರ ಚೀಟಿ / ಚುನಾವಣೆ ಗುರುತಿನ ಚೀಟಿ ಯಾವುದಾದರೊಂದನ್ನು ಕಡ್ಡಾಯವಾಗಿ ಹೊಂದಿರಬೇಕು.

<u>ವಿಧಿವಿಧಾನ :</u>

ಅ) ಯೋಜನೆ ಬಗ್ಗೆ ಕುಶಲಕರ್ಮಿಗಳಿಗೆ ತಿಳಿಸುವುದು.

ಆ) ಡಾ: ಬಿಜೆಆರ್‌ಎಲ್‌ಐಡಿಸಿ ಜಿಲ್ಲಾ ಸಂಯೋಜಕರು ನಿಗದಿ ಪಡಿಸಿದ ನಮೂನೆಯಲ್ಲಿ ವಿವರಗಳನ್ನು ತುಂಬಿ ಶಿಪಾರಸ್ಸು ಮಾಡಿ ಪಾವತಿಗೆ ಅನುಮತಿ ಕೋರಿ ಪ್ಯಾಕ್ಸ್ ಮೂಲಕ ಪ್ರಧಾನ ಕಛೇರಿಗೆ ಕಳುಹಿಸುವುದು.

ಇ) ಹಣ ಪಾವತಿ ಮಾಡುವ ಮೊದಲು ಮೇಲ್ಕಂಡ ಎಲ್ಲಾ ಮಾನದಂಡ / ಅಂಶಗಳನ್ನು ಚಾಚು ತಪ್ಪದೆ ಪರಿಶೀಲಿಸಿ ಅರ್ಹರಿಗೆ ಮಾತ್ರ ಪಾವತಿಸುವುದು.

ಈ) ಪ್ರಧಾನ ಕಛೇರಿ ನಿರ್ದೇಶನದಂತೆ ಹಣ ಪಾವತಿ ಮಾಡಿ ದೃಡೀಕರಿಣದೊಂದಿಗೆ ಕೆಳಕಂಡ ದಾಖಾಲಾತಿಗಳನ್ನು ಸಲ್ಲಿಸುವುದು. ಇಲ್ಲದೆ ಹೋದಲ್ಲಿ ಜಿಲ್ಲಾ ಸಂಯೋಜಕರೇ ಪಾವತಿಸಿದ ಮೊತ್ತವನ್ನು ಭರಿಸಬೇಕಾಗುತ್ತದೆ.

1) ಜಾತಿ ಪ್ರಮಾಣ ಪತ್ರ

2) ಚುನಾವಣೆ ಗುರುತಿನ ಚೀಟಿ / ನಿಗಮದಿಂದ ನೀಡಿದ ಗುರುತಿನ ಚೀಟಿ.

3) ಮರಣ ಪ್ರಮಾಣ ಪತ್ರ

ಸಹಿ/–

**ವ್ಯವಸ್ಥಾಪಕ ನಿರ್ದೇಶಕರು**

# ಅನುಬಂಧ – 2

## ಕುಶಲಕರ್ಮಿಗಳಿಗೆ ವಿವಿಧ ಯೋಜನೆಗಳಡಿ ನೀಡುವ ಸೌಲಭ್ಯಗಳ ವಿತರಣೆಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ವಿಧಿವಿಧಾನಗಳು.

**ನಿಗಮವು ಪರಿಶಿಷ್ಟ ಜಾತಿಗೆ ಸೇರಿದ ಚರ್ಮ ಕುಶಲಕರ್ಮಿಗಳ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದು, ಈ ಯೋಜನೆಗಳಡಿ ಪ್ರಯೋಜನ ಪಡೆಯುವ ಫಲಾನುಭವಿಗಳಿಗೆ ಸವಲತ್ತುಗಳನ್ನು ತಲುಪಿಸುವ ನಿಟ್ಟಿನಲ್ಲಿ ಪಾರದರ್ಶಕತೆಯನ್ನು ಹೊಂದಿರಬೇಕಾಗುತ್ತದೆ ಹಾಗೂ ಸರ್ಕಾರವು ನೀಡುವ ಸವಲತ್ತುಗಳನ್ನು ನೇರವಾಗಿ ಫಲಾನುಭವಿಗಳಿಗೆ ತಲುಪಿಸುವ ಜವಾಬ್ದಾರಿ ನಿಗಮದ ಮೇಲಿರುತ್ತದೆ. ಅಲ್ಲದೇ ಫಲಾನುಭವಿಗಳಿಗೆ ಸವಲತ್ತುಗಳನ್ನು ತಲುಪಿಸಿರುವುದಕ್ಕೆ ದಾಖಲೆಯನ್ನು ನೀಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಕೆಳಕಂಡ ವಿಧಿವಿಧಾನಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿದೆ.**

1. ಯಾವುದೇ ಯೋಜನೆಗಳಡಿ ಸಹಾಯಧನ, ಶಿಷ್ಯವೇತನ, ಬಂಡವಾಳದ ಹಣ ಇತ್ಯಾದಿ ಹಣಕಾಸಿನ ಸೌಲಭ್ಯ ವಿತರಿಸಲು ಅನುವಾಗುವಂತೆ ಪ್ರತಿ ಫಲಾನುಭವಿಯು ಬ್ಯಾಂಕ್ ಖಾತೆ ಹೊಂದಿರುವುದು ಖಡ್ಡಾಯವಾಗಿರುತ್ತದೆ.

2. ಯಾವುದೇ ಯೋಜನೆಗಳಡಿ ಹಣಕಾಸಿನ ಸೌಲಭ್ಯವನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್ ಮೂಲಕವೇ ಜಮಾ ಮಾಡುವುದು ಖಡ್ಡಾಯವಾಗಿರುತ್ತದೆ.

3. ಯಾವುದೇ ಯೋಜನೆಗಳಡಿ ಯಂತ್ರೋಪಕರಣಗಳು, ಟೂಲ್ ಕಿಟ್, ಲಾಸ್ಟ್‌ಗಳು, ಮತ್ತು ಕುಟೀರಗಳನ್ನು ಫಲಾನುಭವಿಗಳಿಗೆ ವಿತರಿಸುವ ಸಂದರ್ಭದಲ್ಲಿ ಸಂಬಂಧಪಟ್ಟ ಕ್ಷೇತ್ರದ ಶಾಸಕರ ಗಮನಕ್ಕೆ ತಂದು ಸಾಧ್ಯವಾದಷ್ಟು ಅವರ ಮೂಲಕವೇ ವಿತರಿಸುವ ವ್ಯವಸ್ಥೆ ಮಾಡುವುದು.

4. ವಿತರಣೆ ಸಂದರ್ಭದಲ್ಲಿ ನಿಗಮದ ಮುಖ್ಯ ವ್ಯವಸ್ಥಾಪಕರುಗಳು/ಪ್ರಾದೇಶಿಕ ವ್ಯವಸ್ಥಾಪಕರುಗಳು ತಪ್ಪದೇ ಹಾಜರಿದ್ದು, ಯಾವುದೆ ತಕರಾರುಗಳಿಲ್ಲದೆ ವಿತರಿಸುವ ವ್ಯವಸ್ಥೆ ಮಾಡುವುದು

5. ಯಂತ್ರೋಪಕರಣಗಳು ಅಥವಾ ಇನ್ನಾವುದೇ ಸವಲತ್ತುಗಳನ್ನು ಫಲಾನುಭವಿಗಳಿಗೆ ವಿತರಿಸಿದ ಸಂಬಂಧ ಅವರಿಂದ ಖಡ್ಡಾಯವಾಗಿ ಸ್ವೀಕೃತಿ ಪಡೆದು ದಾಖಲೆಯಲ್ಲಿಡುವುದು.

6. ವಿತರಣಾ ಪ್ರಕ್ರಿಯೆಯನ್ನು ಖಡ್ಡಾಯವಾಗಿ ಫೋಟೊ ಮತ್ತು ವಿಡಿಯೋ ಮೂಲಕ ಸೆರೆ ಹಿಡಿದು ಯೋಜನೆವಾರು/ ವರ್ಷವಾರು ಮಾಹಿತಿಯನ್ನು ಗಣಕಯಂತ್ರದಲ್ಲಿ ಸ್ಟೋರ್ ಮಾಡಿ ಇಡುವುದು ಮತ್ತು ಹಾರ್ಡ ಕಾಪಿಗಳನ್ನು ಕಡತದಲ್ಲಿರಿಸಿ ಆರ್.ಟಿ.ಐ ಮಾಹಿತಿಗಾಗಿ ರಕ್ಷಣೆ ಮಾಡುವುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

# ಅನುಬಂಧ – 3

| ಕ್ರಸಂ | ಜಿಲ್ಲೆಗಳು | ಕೌಶಲ್ಯ ಅಭಿವೃದ್ಧಿ & ಆದಾಯ ಗಳಿಕೆಗಾಗಿ ತರಬೇತಿ ಶಿಬಿರ ಒಟ್ಟು ಗುರಿ : 900 | | ಮಾನವ ಸಂಪನ್ಮೂಲ ಮತ್ತು ಕೌಶಲ್ಯವೃದ್ಧಿ ಯೋಜನೆ ಒಟ್ಟು ಗುರಿ : 75 | | | ಗ್ರಾಮ/ಪಟ್ಟಣ/ ಹೋಬಳಿ/ ಪಂಚಾಯ್ತಿ ಪ್ರದೇಶದ ಕುಶಲಕರ್ಮಿಗಳಿಗೆ ಚರ್ಮಕಾರರ ಕುಟೀರ ಒದಗಿಸುವುದು | ಕುಶಲಕರ್ಮಿಗಳಿಗೆ ನಗರಪ್ರದೇಶದ ನೇರ ಮಾರಾಟ ಮಳಿಗೆ ಪ್ರಾರಂಭಿಸಲು ಸಹಾಯ ಧನ ಒದಗಿಸುವುದು | ಸ್ವಯಂ ಉದ್ಯೋಗಕ್ಕೆ ದುಡಿಮೆ ಬಂಡವಾಳ ಸಾಲ ಯೋಜನೆ | ಡಾ: ಬಾಬು ಜಗಜೀವನ ರಾಂ ವಸತಿ ಕಾರ್ಯಾಗಾರ ನಿರ್ಮಾಣ (ಪ್ರತಿ ತಾಲ್ಲೂಕಿಗೆ 5 ರಂತೆ |
|---|---|---|---|---|---|---|---|---|---|---|
| | | ಪಾದರಕ್ಷೆ ತರಬೇತಿ ಶಿಬಿರಗಳ ಸಂಖ್ಯೆ (ಪುರುಷರಿ ಮಾತ್ರ) | ಚರ್ಮ ಉತ್ಪನ್ನಗಳ ತರಬೇತಿ ಶಿಬಿರಗಳ ಸಂಖ್ಯೆ (ಮಹಿಳೆಯರಿಗೆ) | 01 Year Certificate Course in FW. Tech /LG Mfg (30) | 18 Months Diploma Course in FW/MS (15) | 03 Yrs Diploma in Leather Tech (30) | ಒಟ್ಟು ಗುರಿ : 300 | ಒಟ್ಟು ಗುರಿ : 90 | | (800) |
| 1 | 2 | 3 | 4 | 5 | 6 | 7 | 8 | 9 | 10 | 11 |
| 01 | ಬೆಂಗಳೂರು (ನಗರ) | -- | 01 | 01 | 01 | 01 | 20 | 10 | ಪ್ರಾರಂಭಿಕ ಶಿಲ್ಕು 164 ಗುರಿ ಇದ್ದು, 2017-18ನೇ ಸಾಲಿನಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗುವುದು. | 20 |
| 02 | ಬೆಂಗಳೂರು (ಗ್ರಾ) | 01 | -- | 01 | 01 | 01 | 05 | 04 | | 20 |
| 03 | ಚಿಕ್ಕಬಳ್ಳಾಪುರ | 01 | -- | 01 | 01 | 01 | 10 | 03 | | 30 |
| 04 | ಚಿತ್ರದುರ್ಗ ಜಿಲ್ಲೆ | 01 | 01 | 01 | 01 | 01 | 15 | 08 | | 30 |
| 05 | ಮೈಸೂರು | 01 | -- | 01 | 01 | 01 | 15 | 10 | | 35 |
| 06 | ಹಾವೇರಿ | 01 | -- | 01 | -- | 01 | 10 | 02 | | 35 |
| 07 | ಬೆಳಗಾಂ ಜಿಲ್ಲೆ | -- | 01 | 01 | 01 | 01 | 15 | 06 | | 50 |
| 08 | ಬೀದರ್ ಜಿಲ್ಲೆ | 01 | -- | 01 | -- | 01 | 15 | 02 | | 25 |
| 09 | ದಾವಣಗೆರೆ ಜಿಲ್ಲೆ | 01 | -- | 01 | 01 | 01 | 10 | 03 | | 30 |
| 10 | ಧಾರವಾಡ ಜಿಲ್ಲೆ | -- | 01 | 01 | 01 | 01 | 10 | 03 | | 25 |
| 11. | ಹಾಸನ ಜಿಲ್ಲೆ | 01 | -- | 01 | -- | 01 | 10 | 02 | | 40 |
| 12 | ಕೋಲಾರ | 01 | -- | 01 | -- | 01 | 10 | 01 | | 25 |

| 1 | 2 | 3 | 4 | 5 | 6 | 7 | 8 | 9 | 10 | 11 |
|---|---|---|---|---|---|---|---|---|---|---|
| 13 | ಬಾಗಲಕೋಟೆ | -- | 01 | 01 | 01 | 01 | 10 | 02 | ಪ್ರಾರಂಭಿಕ ಶಿಲ್ಕು 164 ಗುರಿ ಇದ್ದು, 2017-18ನೇ ಸಾಲಿನಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗುವುದು. | 30 |
| 14 | ಗದಗ | 01 | -- | 01 | -- | 01 | 10 | 02 | | 25 |
| 15 | ತುಮಕೂರು | -- | 01 | 01 | 01 | 01 | 15 | 07 | | 50 |
| 16 | ರಾಮನಗರ | 01 | -- | 01 | -- | 01 | 05 | 01 | | 20 |
| 17 | ಕಲಬುರ್ಗಿ | 01 | -- | 01 | 01 | 01 | 10 | 04 | | 35 |
| 18 | ಕೊಪ್ಪಳ | -- | -- | 01 | -- | 01 | 10 | 01 | | 20 |
| 19 | ಬಳ್ಳಾರಿ | -- | 01 | 01 | -- | 01 | 10 | 02 | | 35 |
| 20 | ಮಂಡ್ಯ | -- | 01 | 01 | -- | 01 | 10 | 01 | | 35 |
| 21 | ಶಿವಮೊಗ್ಗ | 03 | 02 | 01 | 01 | 01 | 10 | 02 | | 35 |
| 22 | ಚಿಕ್ಕಮಗಳೂರು | -- | -- | 01 | -- | 01 | 05 | 02 | | 35 |
| 23 | ವಿಜಯಪುರ | 01 | -- | 01 | 01 | 01 | 10 | 03 | | 25 |
| 24 | ಉತ್ತರ ಕನ್ನಡ | -- | -- | 01 | -- | 01 | 05 | 02 | | 55 |
| 25 | ರಾಯಚೂರು | 01 | -- | 01 | 01 | 01 | 10 | 02 | | 25 |
| 26 | ಚಾಮರಾಜನಗರ | -- | 01 | 01 | -- | 01 | 10 | 01 | | 20 |
| 27 | ಯಾದಗಿರಿ | 01 | -- | 01 | -- | 01 | 10 | 01 | | 15 |
| 28 | ದಕ್ಷಿಣ ಕನ್ನಡ | -- | -- | 01 | 01 | 01 | 05 | 01 | | 25 |
| 29 | ಉಡುಪಿ | -- | -- | 01 | -- | 01 | 05 | 01 | | 15 |
| 30 | ಕೊಡಗು | -- | 01 | 01 | -- | 01 | 05 | 01 | | 15 |
| | **ಒಟ್ಟು** | **18** | **12** | **30** | **15** | **30** | **300** | **90** | | **880** |

ವಿಶೇಷ ಸೂಚನೆ: 1. ಯಾವುದೇ ಜಿಲ್ಲೆ/ತಾಲ್ಲೂಕಿನಲ್ಲಿ ಪ್ರತಿ ಯೋಜನೆಗೆ ಅರ್ಜಿಗಳು ಕಡಿಮೆ ಬಂದು ಗುರಿ ಸಾಧಿಸಲು ಸಾಧ್ಯವಾಗದಿದ್ದಲ್ಲಿ ಅಂತಹ ಉಳಿತಾಯವಾದ ಗುರಿಯನ್ನು ಹೆಚ್ಚುವರಿಯಾಗಿ ಅರ್ಜಿಗಳು ಬಂದಿರುವ ಜಿಲ್ಲೆ/ತಾಲ್ಲೂಕುಗಳಿಗೆ ವರ್ಗಾಯಿಸಲು ನಿಗಮದಿಂದ ಕ್ರಮಕೈಗೊಳ್ಳಲಾಗುವುದು.

ಸಹಿ/

ವ್ಯವಸ್ಥಾಪಕ ನಿರ್ದೇಶಕರು